

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 Issue : 216 Tuesday 06-05-2025 E-mail : maruti.b.hosamani76@gmail.com Page: 4 Price : Rs. 1/-


## ಉದ್ಯೋಗ ಖಾತ್ರಿಗೆ ಕತ್ತರಿ, ಕೆ ಅಯ್ಯನಳ್ಳಿ ಗ್ರಾಮ ಪಂಚಾಯತಿಯಲ್ಲಿ – ಮೇಟಿಗಳದ್ದೇ ದರ್ಬಾರ್

**ಸಿಹಿ ಕಹಿ ಸುದ್ದಿ,**

**ಕೆ.ಅಯ್ಯನಹಳ್ಳಿ** : ಕೊಟ್ಟೂರು ತಾಲೂಕಿನ ಕೆ.ಅಯ್ಯನಹಳ್ಳಿ ಗ್ರಾಮ ಪಂಚಾಯತಿಯ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಗೆ ಮೇಟಿಗಳಿಂದ ಕತ್ತರಿ ಎನ್.ಎಂ.ಆರ್ 120 ಜನ ತೆಗೆಸಿಕೊಂಡು ಆದರೆ ಕೆಲಸ ಮಾಡುವವರು60ಮಂದಿಯಂತೆ ಆದರೆ 120 ಜನಕ್ಕೂ ಖಾತೆಗೆ ಹಣ ಜಮಾ ಆಗುವುದಂತೆ. ಈ ವಿಷಯವನ್ನು ಪಂಚಾಯ್ತಿಯ ಡಾಟಾ ಆಪರೇಟರ್ ಕೊಟ್ರೇಶಿಗೆ ತಿಳಿಸಿದರೆ ಹೌದಾ ಇದೇ ತರ ಮಾಡುತ್ತಾರೆ ಏನು ಮಾಡುವುದು




ಕೆಲಸ ಇಲ್ಲಂದ್ರೆ ಮೇಟಿಗಳು ನಮ್ಮ ಮೇಲೆ ಜಗಳವಾಡುತ್ತಾರೆ. ಹೌದಾ ತಪ್ಪಾಗಿದೆ ಎಂದು ಹೇಳುತ್ತಾರಂತೆ ಆದರೆ ಮೇಲಿನ ಅಧಿಕಾರಿ ನರೇಗಾ ಸಹಾಯಕ ನಿರ್ದೇಶಕರಾದ ಹೆಚ್. ವಿಜಯಕುಮಾರ್ ಮತ್ತು ಕಾರ್ಯನಿರ್ವಾಹಕಅಧಿಕಾರಿಡಾ, ಬಿ.ಆನಂದ್ ಕುಮಾರ್ ಇವರಿಗೆ ತಿಳಿಸಿದರೆ. ಈ ಕಾಮಗಾರಿಗಳ



ಬಗ್ಗೆ ನಿರ್ಲಕ್ಷ್ಯ ತೋರುವವರಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಕೂಲಿ ಕಾರ್ಮಿಕರು ಗೂಳೇ ಹೋಗಬಾರದು ಎಂದು ಸರ್ಕಾರ ಬಡ ಕೂಲಿ ಕಾರ್ಮಿಕರಿಗೆ ಕೆಲಸ ನೀಡಿದರೆ ಇದನ್ನು ಕೆಲವು ವ್ಯಕ್ತಿಗಳು ಪಂಚಾಯಿತಿಯಲ್ಲಿ ಮೇಟಿ ಎಂದು ಹೆಸರು ತೆಗೆದು–ಕೊಂಡು ಅವರು ದುರುಪಯೋಗ ಪಡಿಸಿ ಕೊಳ್ಳುತ್ತಾರೆ ಇದ–ಕ್ಕೆ ಕಡಿವಾಣವಿಲ್ಲವೇ ಎಂದು ಕೆ.ಅಯ್ಯನಹಳ್ಳಿ ಗ್ರಾಮ ಪಂಚಾಯತಿ ಸದಸ್ಯರಾದ ರಾಜು ಮರೂರು ನಮ್ಮ ಸುದ್ದಿ ಮಾಧ್ಯಮ ಯೊಂದಿಗೆ ದೂರು ನೀಡಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್.ಕುಮಾರ್.ಸಿ.ಕೊಟ್ಟೂರು**


## ಓದುವ ವಿದ್ಯಾರ್ಥಿನಿಯರಿಗೆ ಸ್ಫೂರ್ತಿಯಾದ ಎನ್.ನವ್ಯ

**ಸಿಹಿ ಕಹಿ ಸುದ್ದಿ,**

**ಮೋಕ್ಷಗುಂಡಮ್** : ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಮೋಕ್ಷ ಗೊಂಡಮ್ ವಿಶ್ವೇಶ್ವರಯ್ಯ ವಿದ್ಯಾ ಮಂದಿರದ ವಿದ್ಯಾರ್ಥಿನಿ ನವ್ಯ. ಎನ್ ಈ ಬಾರಿಯ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಒಟ್ಟು 588 ಅಂಕಗಳನ್ನು ಪಡೆದು ಶೇ. 94 ರಷ್ಟು ಫಲಿತಾಂಶ ಪಡೆದಿದ್ದಾಳೆ. ಕನ್ನಡ 123, ಇಂಗ್ಲಿಷ್ 99, ಹಿಂದಿ 98, ಗಣಿತ 82, ವಿಜ್ಞಾನ 92, ಸಮಾಜ ವಿಜ್ಞಾನದಲ್ಲಿ 94 ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾಳೆ.

ನವ್ಯ.ಎನ್ ಇಲ್ಲಿನ ತೇರುಮಲ್ಲೇಶ್ವರ ದೇವ ಸ್ಥಾನ ಹತ್ತಿರದ ನಿವಾಸಿಗಳಾದ ಬಿ.ನಾಗರಾಜ್ ಮತ್ತು ಕೆ.ಸರಸ್ವತಿ ಇವರ ಪುತ್ರಿ,

ಮೋಕ್ಷಗುಂಡಮ್ ವಿದ್ಯಾ ಮಂದಿರದ ಟಾಪ್ 3 ನಲ್ಲಿ ನವ್ಯ ಒಬ್ಬಳಾಗಿದ್ದಾಳೆ. ಮುಖ್ಯೋಪಾಧ್ಯಾಯರು, ಶಿಕ್ಷಕರು ಮತ್ತು ಪೋಷಕರು ಸ್ನೇಹಿತರು, ಹಿತೈಷಿಗಳು



ಅಭಿನಂದಿಸಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಲಿ ಎಂಬುದೇ ನಮ್ಮ ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್ ದ ಅಭಿಲಾಷೆ ಆಗಿದೆ ಎಂದು ವರದಿಯಾಗಿದೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಟಿ.ಎಚ್ ಶಿವಮೂರ್ತಿ. ಕೋಡಿಹಳ್ಳಿ.ಚಿತ್ರದುರ್ಗ**

## “ಈ ಪಾದ ಪುಣ್ಯ ಪಾದ”ಕ್ಕೆ ಪ್ರಶಸ್ತಿಯ ಗರಿ


**ಸಿಹಿ ಕಹಿ ಸುದ್ದಿ,**



**ಬೆಂಗಳೂರ** : ಹೊಸ ಹೊಸ ವಿಷಯ, ವಿಭಿನ್ನ ಪ್ರಯೋಗಗಳ ವ್ಯಾಲಕ ಚಿತ್ರರಂಗದಲ್ಲಿ ಗುರುತಿಸಿಕೊಂಡಿರುವ ಪ್ರತಿಭಾವಂತ ಯುವ ನಿರ್ದೇಶಕ ‘ಸಿದ್ದು ಪೂರ್ಣಚಂದ್ರ’ ರವರು ಕಥೆ ಬರೆದು ನಿರ್ದೇಶನ ಮಾಡಿರುವ ‘ಈ ಪಾದ ಪುಣ್ಯ ಪಾದ’ ಚಿತ್ರಕ್ಕೆ ಪ್ರತಿಷ್ಠಿತ ಚಲನಚಿತ್ರೋತ್ಸವಗಳಲ್ಲೊಂದಾದ “ದಾದಾ ಸಾಹೇಬ್ ಫಾಲ್ಕೆ” ಚಲನಚಿತ್ರೋತ್ಸವದಲ್ಲಿ ಪ್ರದರ್ಶನವಾಗಿ ‘ಬೆಸ್ಟ್ ಜ್ಯೂರಿ ಅವಾರ್ಡ್’ ಪಡೆದುಕೊಂಡಿದೆ.

ಈ ಚಿತ್ರವು ಬಿಡುಗಡೆ ಮುನ್ನವೆ ಈಗಾಗಲೇ ಹಲವು ಅಂತಾರಾಷ್ಟ್ರೀಯಚಲನಚಿತ್ರೋತ್ಸವಗಳಲ್ಲಿಭಾಗವಹಿಸಿ ಅನೇಕಪ್ರಶಸ್ತಿಗಳನ್ನುತನ್ನದಾಗಿಸಿಕೊಂಡಿದೆ.ಒಬ್ಬಆನೆ ಕಾಲುರೋಗಿಯ ಕಥಾ ವಸ್ತುವನ್ನು ಒಳಗೊಂಡಿದ್ದು ,ಮನುಷ್ಯನಿಗೆ ದೈಹಿಕವಾಗಿ ಯಾವುದೇ ಕಾಯಿಲೆಗಳು ಬಂದಾಗ ಮಾನಸಿಕ ಸ್ಥಿತಿಯ ಅರಿವು ಮತ್ತು ಆ ವ್ಯಕ್ತಿಯ ಸಂಬಂಧಗಳ ಮನಸ್ಥಿತಿ ಹೇಗಿರುತ್ತದೆ ಎಂಬ ಅತೀ ಸೂಕ್ಷ್ಮ ವಿಷಯಗಳನ್ನು ಈ ಚಿತ್ರ ಒಳಗೊಂಡಿದೆ. ತಮ್ಮ ಪ್ರತಿ ಚಿತ್ರದಲ್ಲೂ ಒಂದೊಂದು ವಿಭಿನ್ನ ವಿಷಯಗಳನ್ನಿಟ್ಟುಕೊಂಡು ಸಿನಿಮಾ ಮಾಡುತ್ತಾ ಬಂದಿರುವ ಸಿದ್ದು ಪೂರ್ಣಚಂದ್ರ. ‘ದಾರಿ ಯಾವುದಯ್ಯ ವೈಕುಂಠಕ್ಕೆ’ ಮತ್ತು ‘ತಾರಿಣಿ’ ಚಿತ್ರಗಳ ನಂತರ ಇದೀಗ ‘ಈ ಪಾದ ಪುಣ್ಯಪಾದ’ ಎಂಬ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಈ ಬಾರಿ ಅವರು ಈ ಚಿತ್ರದಲ್ಲಿ ಆನೆ ಕಾಲು ರೋಗಿಯ ಕಥೆ ಹೇಳುವುದಕ್ಕೆ ಹೊರಟಿದ್ದಾರೆ.

“ಪೂರ್ಣಚಂದ್ರ ಫಿಲಂಸ್” ನಿರ್ಮಾಣ ಸಂಸ್ಥೆಯ ಜೊತೆಗೆ ಸಹ ನಿರ್ಮಾಪಕರಾಗಿ “ಸನ್ನಿ” ಯವರು



ಕೈ ಜೋಡಿಸಿದ್ದಾರೆ. ಮುಖ್ಯ ಪಾತ್ರದಲ್ಲಿ ‘ಆಟೋ ನಾಗರಾಜ್’ ಅಭಿನಯಿಸಿದ್ದಾರೆ. ಉಳಿದಂತೆ ರಶ್ಮಿ ಮೈಸೂರ್,ಚೈತ್ರ,ಜೈಶೆಟ್ಟಿ,ಬಲರಾಜ್‌ವಾಡಿ,ಪ್ರಮೀಳಾ ಸುಬ್ರಮಣ್ಯ, ಬೇಬಿ ರಿಧಿ ಇನ್ನು ಮುಂತಾದವರು ಅಭಿನಯಿಸಿದ್ದಾರೆ. ರಾಜು ಹೆಮ್ಮಿಗೆಪುರ ರವರ ಛಾಯಾಗ್ರಹಣ, ಅನಂತ್ ಆರ್ಯನ್ ರವರ ಸಂಗೀತ, ದೀಪು ಸಿ ಎಸ್ ರವರ ಸಂಕಲನ, ಕೃಷ್ಣಮೂರ್ತಿಯವರ ಸಿಂಕ್ ಸೌಂಡ್ ಒಳಗೊಂಡಿದೆ. ಪತ್ರಿಕಾ ಸಂಪರ್ಕ ಸುಧೀಂದ್ರ ವೆಂಕಟೇಶ, ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ಅವರದಿದೆ.

**–ಡಾ.ಪ್ರಭು ಗಂಜಿಹಾಳ**

**ಮೊ–9448775346**

## ಸ್ವಚ್ಛ, ಸುಂದರ ಪರಿಸರ ನಿರ್ಮಾಣ ನಮ್ಮೆಲ್ಲರ ಆದ್ಯಕರ್ತವ್ಯ– ಡಾ. ಅನಂತಮತಿ ಯಂಡೋಳಿ

**ರಬಕವಿ–ಬನಹಟ್ಟಿ** : ಸ್ವಚ್ಛ ಮತ್ತು ಸುಂದರಪರಿಸರವನ್ನುನಿರ್ಮಾಣ ಮಾಡುವುದು ನಮ್ಮೆಲ್ಲರ ಪ್ರಥಮ ಕರ್ತವ್ಯವಾಗಿದೆ. ಸ್ವಚ್ಛ ಪರಿಸರದಿಂದ ನಮ್ಮ ಮನಸ್ಸು ಕೂಡಾ ಸ್ವಚ್ಛವಾಗಿರುತ್ತದೆ ಎಂದು ರಬಕವಿಯ ಸಾಮಾಜಿಕ ಕಾರ್ಯಕರ್ತೆ, ಡಾ. ಅನಂತಮತಿ ಯೆಂಡೊಳ್ಳಿ ತಿಳಿಸಿದರು.

ಅವರು ಸೋಮವಾರ ಸಮೀಪದ ನಾವಲಗಿ ಗ್ರಾಮದಲ್ಲಿ ನಡೆಯುತ್ತಿರುವ ಯೋಗ ಮತ್ತು ಸಂಸ್ಕಾರ ಶಿಬಿರದಲ್ಲಿ ಸ್ವಚ್ಛತೆ ಮತ್ತು ಪರಿಸರ ಕುರಿತು ಉಪನ್ಯಾಸ ನೀಡಿದರು.

ಸ್ವಚ್ಛತೆ ನಮ್ಮ ಜೀವನದ ಅವಿಭಾಜ್ಯ ಅಂಗವಾಗಬೇಕು. ಸ್ವಚ್ಛ ಮತ್ತು



ಸುಂದರ ಪರಿಸರದಲ್ಲಿಯೇ ದೇವರನ್ನುಕಾಣುವಂತಾಗಬೇಕು. ಗ್ರಾಮದಲ್ಲಿ ಗಿಡ ಮರಗಳನ್ನು ಬೆಳೆಸುವುದರ ಜೊತೆಗೆ ಅವುಗಳ ರಕ್ಷಣೆಗೆ ಶಿಬಿರಾರ್ಥಿಗಳು ಮುಂದಾಗಬೇಕು. ಗ್ರಾಮವನ್ನು ಹಸಿರನ್ನಾಗಿಡಲು ನಾವೆಲ್ಲರೂ ಪ್ರಯತ್ನಿಸಬೇಕು ಎಂದು ಡಾ. ಯೆಂಡೊಳ್ಳಿ ತಿಳಿಸಿದರು.

ಕನ್ನೇರಿ ಮಠದ ಬಸವರಾಜ ಸ್ವಾಮೀಜಿ, ಬಸಪ್ಪ ಎಂಟೆತ್ತನವರ, ಸುಭಾಸ ಕಂಪು, ಮಹಾಂತೇಶ ಮನ್ನಿ, ಶಂಕರ ಸಂಗಾನಟ್ಟಿ, ಗಂಗಪ್ಪಅಮ್ಮಲಜೇರಿ, ಮಲ್ಲು ಹೂಗಾರ, ಕಾಡೇಶ ಕಂಪು ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಕಷ್ಟಗಳನ್ನು ಮೆಟ್ಟಿ ನಿಲ್ಲುವ ಶಕ್ತಿ ಕೊಟ್ಟಿದ್ದು ಅಣ್ಣ ಬಸವಣ್ಣ: ವೀಣಾ ಕಾಶಪ್ಪನವರ

**ಜಮಖಂಡಿ** : ಹೆಣ್ಣು ಮಕ್ಕಳಿಗೆ ಕಷ್ಟದ ಬುತ್ತಿ ತಲೆಯ ಮೇಲೆ ಸದಾ ಇದ್ದೇ ಇರುತ್ತದೆ. ಆದರೆ, ಕಷ್ಟಗಳನ್ನು ಮೆಟ್ಟಿನಿಂತು ಬದುಕನ್ನು ಜಯಿಸಲು ಅಣ್ಣ ಬಸವಣ್ಣ ಹೆಣ್ಣು ಮಕ್ಕಳಿಗೆ ಶಕ್ತಿ ಕೊಟ್ಟಿದ್ದಾನೆ. ಆ ಶಕ್ತಿಯನ್ನು ಬಳಸಿ ಹುಟ್ಟಿದ ಮನೆಗೆ ಮತ್ತು ಕೊಟ್ಟ ಮನೆಗೆ ಕೀರ್ತಿ ತರುವ ಕೆಲಸವನ್ನು ಮಹಿಳೆಯರು ಮಾಡಬೇಕು ಎಂದು ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ ಹೇಳಿದರು.



ಜಮಖಂಡಿ ನಗರದ ಐತಿಹಾಸಿಕ ಓಲೇಮಠದ ಆಶ್ರಯದಲ್ಲಿ ಬಸವ ಜಯಂತಿ ನಿಮಿತ್ಯ ಏಪ್ರಿಲ್ 15 ರಿಂದ 29 ರವರೆಗೆ ಹಮ್ಮಿಕೊಂಡಿರುವ ಶರಣರ ವಚನ ಪ್ರವಚನ ಮತ್ತು ಸದ್ಭಾವನಾ ಪಾದಯಾತ್ರೆ ಅಂಗವಾಗಿ ಹದಿನಾಲ್ಕನೇ?ಯ ದಿನವಾದ ಸೋಮವಾರ ಸಂಜೆ ನಡೆದ ವಚನ ಜಾತ್ರಾ ಮಹೋತ್ಸವದ ಮುಖ್ಯಅತಿಥಿಯಾಗಿಅವರುಮಾತನಾಡಿದರು. ಮುಕ್ಕೋಟಿ ದೇವರಿಗೆ ಕೈ ಮುಗಿಯುವ ಬದಲಾಗಿ ಜೀವ ಕೊಟ್ಟ ತಂದೆ–ತಾಯಿಗೆ ದಿನಾಲು ಕೈಮುಗಿದು ಏನೇ ಬಂದರೂ ಮೆಟ್ಟಿ ನಿಲ್ಲುವ ಶಕ್ತಿ ಬರಲಿ ಎಂದು ಪ್ರಾರ್ಥಿಸಬೇಕು. ತಂದೆ–ತಾಯಿಯ ಆದರ್ಶಗಳನ್ನು ಪಾಲಿಸಬೇಕು ಎಂದರು.

ಮಹಿಳೆಯನ್ನು ಭೂತಾಯಿ, ಗೋಮಾತೆ, ನದಿ ಇತ್ಯಾದಿಗಳಿಗೆ ಹೋಲಿಸಲಾಗುತ್ತದೆ. ಬಹುತೇಕ ಎಲ್ಲ ಹಬ್ಬಗಳು ಹೆಣ್ಣು ಮಕ್ಕಳಿಗಾಗಿಯೇ ಇವೆ. ಅದು ಈ ನಾಡಿನ ಸಂಸ್ಕೃತಿ ಮತ್ತು ಸಂಸ್ಕಾರ. ನಾಡಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಹೊಣೆ ಮಹಿಳೆಯರ ಮೇಲಿದೆ ಎಂದರು.

ಓಲೇಮಠದ ಆನಂದ ಶ್ರೀಗಳು ನೇತೃತ್ವ ವಹಿಸಿ ಮಾತನಾಡಿ, ‘ದ್ವೇಷ ಬಿಡು, ಪ್ರೀತಿ ಮಾಡು’ ಎಂಬ ತತ್ವವನ್ನು ಅಳವಡಿಸಿಕೊಳ್ಳಬೇಕು. ಒಂದು ಒಳ್ಳೆಯ ವಿಚಾರವನ್ನು ಮನಸ್ಸಿನಲ್ಲಿ ಇಟ್ಟುಕೊಂಡರೆ ತಲೆಯಲ್ಲಿನ ನೂರು ಕೆಟ್ಟ ವಿಚಾರಗಳು ದೂರವಾಗುತ್ತವೆ ಎಂದು ಆಶೀರ್ವಚನ ನೀಡಿದರು.

ಝುಂಜರವಾಡದ ಬಸವರಾಜೇಂದ್ರ ಶರಣರು ಪ್ರವಚನ ನುಡಿಗಳನ್ನು ಹಂಚಿಕೊಳ್ಳುತ್ತ ಮಾತನಾಡಿ, ಶರಣರು ತಮಗಾಗಿ ಬದುಕಲಿಲ್ಲ. ಬದಲಾಗಿ ನಮಗಾಗಿ ಬದುಕಿದರು. ಕಲ್ಯಾಣದಲ್ಲಿ ಹನ್ನೆರಡನೇ ಶತಮಾನದಲ್ಲಿ ನಡೆದದ್ದು ರಕ್ತ ಕ್ರಾಂತಿಯಲ್ಲ. ಅದು ಭಕ್ತಿ ಕ್ರಾಂತಿ. ವಚನ ಸಾಹಿತ್ಯವನ್ನು ಉಳಿಸಿಕೊಳ್ಳಲು ಶರಣರು ರಾತ್ರೋರಾತ್ರಿ ಕಲ್ಯಾಣವನ್ನು ತೊರೆದಿದ್ದರು ಎಂದರು.

ನಡೆದಾಡುವ ಕಂಪ್ಯೂಟರ್ ಎಂದೇ ಖ್ಯಾತರಾಗಿರುವ ಅಥಣಿಯ ಬಸವರಾಜ ಉಮರಾಣಿ ಮಾತನಾಡಿ, ಅಂಕಿ–ಸಂಖ್ಯೆಗಳ ಗುಣಾಕಾರ, ಭಾಗಾಕಾರ ಸಲೀಸಾಗಿ ಮಾಡಿ ತೋರಿಸಿದರು. ಯಾವಾಗಲೋ ಒಮ್ಮೆ ಭೇಟಿಯಾದಾಗ ನೀಡಿದವರ ಮೊಬೈಲ್ ಸಂಖ್ಯೆಯನ್ನು ಹೇಳಿ ಬೆರಗು ಮೂಡಿಸಿದರು. ಜನ್ಮ ದಿನಾಂಕ ಹೇಳಿದವರ ಹುಟ್ಟಿದ ದಿನದ ವಾರವನ್ನು ಥಟ್ಟನೆ ಹೇಳಿ ಎಲ್ಲರನ್ನು ವಿಸ್ಮಯಗೊಳಿಸಿದರು. ಮಕ್ಕಳ ಕೈಗೆ ಮೊಬೈಲ್ ಫೋನ್ ಕೊಡಬೇಡಿ. ಪುಸ್ತಕ ಕೊಡಿ ಎಂದು ಪಾಲಕರಲ್ಲಿ ಮನವಿ ಮಾಡಿದರು.

ಜಿ.ಪಂ. ಮಾಜಿ ಉಪಾಧ್ಯಕ್ಷ ಸುಶೀಲಕುಮಾರ ಬೆಳಗಲಿ ಮಾತನಾಡಿದರು. ಮುತ್ತಿನಕಂತಿ ಹಿರೇಮಠದ ಶಿವಲಿಂಗ ಶ್ರೀಗಳು, ಮುತ್ತೂರಿನ ರಾಚೋಟೇಶ್ವರ ಮಠದ ಗುರುಸಿದ್ಧೇಶ್ವರ ಮಹಾಸ್ವಾಮಿಗಳು,

ಕಡಪಟ್ಟಿಯ ಜಗದೀಶ್ವರ ಮಠದ ಅಭಿನವ ರಾಚೋಟೇಶ್ವರ ಶ್ರೀಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಶಿವಯ್ಯ ನಾಗರಾಳಮಠ, ಪ್ರದೀಪ ಮಹಾಲಿಂಗಪುರಮಠ, ಮೊನಿಕಾ ಹಿರೇಮಠ, ರಾಜು ವಾರದ, ಶ್ರೀಶೈಲ ತೇಲಿ, ಸದಾಶಿವ ಸೊನ್ನದ, ಚನ್ನಪ್ಪ ಬಿರಾದಾರ, ಶಂಕರ ಜಾಲಿಗಿಡದ ಇತರರು ಹಾಜರಿದ್ದರು.

ರಜನಿ ಕರಡಿ ವಚನ ಗಾಯನ ಪ್ರಸ್ತುತ ಪಡಿಸಿದರು. ಸಾನ್ವಿ ಅರಕೆ ನೃತ್ಯ ಪ್ರದರ್ಶಿಸಿದರು. ಗದುಗಿನ ಗವಾಯಿ ರವಿಕುಮಾರ ಬೆಣ್ಣಿ, ತಬಲಾ ವಾದಕ ಹನಮಂತ ಅಂಕದ ಸಂಗೀತ ಸೇವೆ ಸಲ್ಲಿಸಿದರು. ಶಿವಲೀಲಾ ಲಿಗಾಡಿ ಸ್ವಾಗತಿಸಿದರು. ಬಿಆರ್‌ಪಿ ದಾನಮ್ಮ ಪಂಚಕಟ್ಟಿಮಠ ಸೊಗಸಾಗಿ ನಿರೂಪಿಸಿದರು.

## 10 ಕೋಟಿ ರೂ. ವೆಚ್ಚದಲ್ಲಿ ಮಿನಿ ವಿಧಾನ ಸೌಧ – ನಿರ್ಮಾಣಕ್ಕೆ ಭೂಮಿ ಪೂಜೆ

**ಸಿಹಿ ಕಹಿ ಸುದ್ದಿ,**

**ಮಾನ್ವಿ** : ತಾಲೂಕಿನ ವಿವಿಧ ಸರಕಾರಿ ಇಲಾಖೆಗಳ ಸೌಲಭ್ಯಗಳನ್ನು ಒಂದೇ ಸೂರಿ ನಡಿಯಲ್ಲಿ ಸಾರ್ವಜನಿಕರಿಗೆ ಸುಲಭವಾಗಿ ತಲುಪಿಸುವ ಉದ್ದೇಶದಿಂದ ಮಿನಿ ವಿಧಾನ ಸೌಧ ನಿರ್ಮಿಸಲು ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್ ಬೋಸರಾಜು ಹಾಗೂರಾಯಚೂರುಜಿಲ್ಲಾಉಸ್ತುವಾರಿಸಚಿವ ಶರಣ ಪ್ರಕಾಶ್ ಪಾಟೀಲ್ ಶನಿವಾರ ಚಾಲನೆ ನೀಡಿದರು. ಮಿನಿ ವಿಧಾನ ಸೌಧ ನಿರ್ಮಾಣದ ನಂತರ ವಿವಿಧ ಇಲಾಖೆಗಳು ಅಧಿಕಾರಿಗಳು ಒಂದೆಡೆ ಸಿಗುವುದರಿಂದ ಸಾರ್ವಜನಿಕರ ಅಲೆದಾಟ ತಪ್ಪುತ್ತದೆ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್ ಬೋಸರಾಜು ತಿಳಿಸಿದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಜನಪರ ಯೋಜನೆಗಳ ಮೂಲಕ ಇಂತಹ ಅನೇಕ ಕಾರ್ಯಾಲಯಗಳ ನಿರ್ಮಾಣದ ಮೂಲಕ ಸಾರ್ವಜನಿಕರ ಸಮಸ್ಯೆಗಳಿಗೆ



ಸ್ಪಂದಿಸುತ್ತಿದ್ದೇವೆ. ಮಾನ್ವಿ ವಿಧಾನ ಸಭಾ ಕ್ಷೇತ್ರದ ಶೈಕ್ಷಣಿಕ ಸಾಮಾಜಿಕ ಆರ್ಥಿಕ ಸೇರಿದಂತೆ ಸರ್ವಾಂಗೀಣ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ.ಈಮಿನಿವಿಧಾನಸೌಧನಿರ್ಮಾಣ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಗುಣಮಟ್ಟ ದೊಂದಿಗೆ ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸ ಬೇಕೆಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಶಾಸಕ ಹಂಪಯ್ಯ ನಾಯಕ, ಕಾಂಗ್ರೆಸ್ ಮುಖಂಡರಾದ ಕೆ ಶಾಂತಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಗಫೂರ್ ಸಾಬ್, ಬಾಲಸ್ವಾಮಿ ಕೊಡ್ಲಿ, ಶಿವರಾಜ ನಾಯಕ ವಕೀಲ, ಸುಭಾಷ್ ನಾಯಕ್, ಹನುಮೇಶ್ ಮದ್ಲಾಪುರ್, ತಿಪ್ಪಣ್ಣ ಬಾಗಲವಾಡ್, ಮಹಾಂತೇಶ್ ಸ್ವಾಮಿ ರೌಡೂರ್, ಖಾಲೀದ್ ಖಾದ್ರಿ, ಹೈಮದ್ ರಾಹುಲ್ ಸೇರಿದಂತೆ ಪುರ ಸಭೆಯ ಸದಸ್ಯರು, ವಿವಿಧ ಇಲಾಖೆಯ ಅಧಿಕಾರಿಗಳಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಗ್ರಾಮೀಣ ಪ್ರತಿಭೆಗಳಿಗೆ ಕೆಎಲ್‌ಇ ಸಂಸ್ಥೆ ವರದಾನ: ಜಯಾನಂದ ಮುನವಳ್ಳಿ

**ಮಹಾಲಿಂಗಪುರ** : ಗ್ರಾಮೀಣ ಭಾಗದ ಸುಪ್ತ ಪ್ರತಿಭೆಗಳಿಗೆ ತಾಂತ್ರಿಕ ಶಿಕ್ಷಣ ನೀಡುವ ಮೂಲಕ ಕೆಎಲ್‌ಇ ಸಂಸ್ಥೆ ವರದಾನವಾಗಿದೆ ಎಂದು ಬೆಳಗಾವಿಯ ಕೆಎಲ್‌ಇ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕರಾದ ಜಯಾನಂದ ಮುನವಳ್ಳಿ ಹೇಳಿದರು.

ಮಹಾಲಿಂಗಪುರದ ಕೆಎಲ್‌ಇ ಸಂಸ್ಥೆಯ ಬಿಸಿಎ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ದಿ ಜರ್ನಿ ಬಿಗಿನ್ಸ್ ಎಂಬ ಸಾಧನಾ ಸಂಭ್ರಮ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಾಧಕ ವಿದ್ಯಾರ್ಥಿಗಳನ್ನು ವಿಶೇಷವಾಗಿ ಪಾಲಕರೊಂದಿಗೆ ಸನ್ಮಾನಿಸಿ ಅಭಿನಂದಿಸಿ ಅವರು ಮಾತನಾಡಿದರು.

ಇಲ್ಲಿನ ಕೆಎಲ್‌ಇ ಸಂಸ್ಥೆಯ ಬಿಸಿಎ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳು ಕಲಿಯುವಾಗಲೇ ಪ್ಲೇಸಮೆಂಟ್ (ಕ್ಯಾಂಪಸ್ ಸಂದರ್ಶನ) ದಲ್ಲಿ ಭಾಗವಹಿಸಿ ಎಲ್ಲ 34 (ಶೇ.100) ವಿದ್ಯಾರ್ಥಿಗಳು ಬಹುರಾಷ್ಟ್ರೀಯ ಕಂಪನಿಗಳಿಗೆ ಆಯ್ಕೆಯಾಗಿದ್ದಾರೆ.

ಬಿಸಿಎ ವಿಭಾಗದ ಹಿರಿಯ ಸಂಯೋಜಕರಾದ ಡಾ. ಪ್ರಕಾಶ ಕಡಕೋಳ ಅವರ ಮಾರ್ಗದರ್ಶನದಲ್ಲಿ ಎಲ್ಲ ವಿದ್ಯಾರ್ಥಿಗಳನ್ನು ಅವರ ತಂದೆ ತಾಯಿಗಳ ಮಧ್ಯೆ ಕೂಡ್ರಿಸಿ ಸಾಮೂಹಿಕವಾಗಿ ಸನ್ಮಾನಿಸಲಾಯಿತು. ಮಕ್ಕಳ ಸನ್ಮಾನದ ಸೆರಗು ಹೆತ್ತವರ ಹೆಗಲ ಮೇಲೆ ಬೀಳುವಂತೆ ಮಾಡಿ ಅವರಲ್ಲಿ ಸಾರ್ಥಕ ಭಾವ



ಮೂಡಿಸಲಾಯಿತು.

ಗ್ರಾಮೀಣ ಭಾಗದ ರೈತನ ಮಕ್ಕಳು ಪ್ರತಿಷ್ಠಿತ ಟಾಟಾ ಗ್ರುಪ್ಸ್,

ಇನ್ಫೋಸಿಸ್, ವಿಪ್ರೋ ಸೇರಿದಂತೆ ನಾನಾ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಸಾಫ್ಟ್ ವೇರ್ ಇಂಜಿನಿಯರಾಗಿ ಆಯ್ಕೆಯಾಗಿದ್ದಾರೆ. ಮಕ್ಕಳ ಸಾಧನೆ, ಸನ್ಮಾನ ಕಂಡ ಪಾಲಕರು ಆನಂದ ಭಾಷ್ಪ ಸುರಿಸಿದರು.

ಜೊತೆಗೆ ಮಹಾಲಿಂಗಪುರ ಕೆಎಲ್‌ಇ ಸಂಸ್ಥೆಯ ಎಸ್ಸಿಪಿ ಪದವಿ ಪೂರ್ವ ಕಾಲೇಜಿನಲ್ಲಿ 2024–25 ನೇ ಸಾಲಿನ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ರ್ಯಾಂಕ್ ಪಡೆದ ಲಕ್ಷ್ಮೀ ಪಾಲಭಾಂವಿ, ದ್ವಿತೀಯ ರ್ಯಾಂಕ್ ಪಡೆದ ನಂದಿನಿ ಭೂಷಣ್ಣವರ, ತೃತೀಯ ರ್ಯಾಂಕ್ ಪಡೆದ ಕೀರ್ತಿ ತಿರಕನ್ನವರ ಅವರನ್ನು ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು.

ಸ್ಥಳೀಯ ಆಡಳಿತ ಮಂಡಳಿ ಸದಸ್ಯರಾದ ಅಶೋಕ ಅಂಗಡಿ, ಸಂತೋಷ ಹುದ್ದಾರ, ಡಾ. ಪ್ರವೀಣ ಪಾಚ್ಚಾಪೂರ, ಕೆಎಲ್‌ಇ ಪಾಲಿಟೆಕ್ನಿಕ್ ಪ್ರಾಚಾರ್ಯ ಎಸ್. ಐ. ಕುಂದಗೋಳ, ಪದವಿ ಪ್ರಾಚಾರ್ಯ ಡಾ. ಕೆ. ಎಂ. ಅವರಾದಿ, ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎಲ್. ಬಿ. ತುಪ್ಪದ, ಪ್ರೌಢಶಾಲೆ ಉಪಪ್ರಾಂಶುಪಾಲ ಬಿ. ಎನ್. ಅರಕೇರಿ, ಬಿಸಿಎ ಕಾಲೇಜು ಸಂಯೋಜಕ ಎಸ್. ಐ. ಪಾಟೀಲ, ವಿನಾಯಕ ಬಡಿಗೇರ, ಆನಂದ ಉರಬಿ, ಸುಮಾ ಕಾಮಗೊಂಡ, ಅಕ್ಷತಾ ಹನಮಗೊಂಡ, ಈಶ್ವರಿ ಕಾಗಿ, ಅಶ್ರಫ್ ಅಲಾಸ್, ಸಿಂಧೂ ತುರಿಹಾಳ, ಐಶ್ವರ್ಯ ಅಳ್ಳಿಚಂಡಿ, ಪ್ರಜ್ವಲ ಕರೆಹೊನ್ನ, ವೈಷ್ಣವಿ ಉಳ್ಳಾಗಡ್ಡಿ, ಮನೋಜ ತಡಸಲ ಉಪಸ್ಥಿತರಿದ್ದರು.

# ಪ್ರಜಾಪ್ರಭುತ್ವದಲ್ಲಿ ಚರ್ಚೆ ಇರುತ್ತೆ, ಸರ್ವಾಧಿಕಾರದಲ್ಲಿ 'ನಾನು ಹೇಳ್ತೀನಿ–ನೀವು ಕೇಳಿ' ಎನ್ನುವ ಧೋರಣೆ ಇರುತ್ತೆ: ಸಿ.ಎಂ.ಸಿದ್ದರಾಮಯ್ಯ

## ಮನ್ ಕಿ ಬಾತ್ ನಲ್ಲಿ ಚರ್ಚೆ ಇಲ್ಲ. ಏಕಮುಖವಾಗಿ ಹೇಳಿದ್ದನ್ನು ಕೇಳಬೇಕು ಎನ್ನುವ ಧೋರಣೆ ಇದೆ. ಇದು ಸರ್ವಾಧಿಕಾರಿ ಲಕ್ಷಣ: ಸಿ.ಎಂ.ಸಿದ್ದರಾಮಯ್ಯ



**ಕೂಡಲ ಸಂಗಮ :** ಮನ್ ಕಿ ಬಾತ್ ನಲ್ಲಿ ಚರ್ಚೆ ಇಲ್ಲ. ಏಕಮುಖವಾಗಿ ಹೇಳಿದ್ದನ್ನು ಕೇಳಬೇಕು ಎನ್ನುವ ಧೋರಣೆ ಇದೆ. ಇದು ಸರ್ವಾಧಿಕಾರಿ ಲಕ್ಷಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಟೀಕಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಸವ ಜಯಂತಿಪ್ರಯುಕ್ತಆಯೋಜಿಸಿದ್ದ"ಶರಣರ ವೈಭವ–2025"ನ್ನುಉದ್ಘಾಟಿಸಿ,ಬಸವಶ್ರೀ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಪ್ರಜಾಪ್ರಭುತ್ವದಲ್ಲಿ ಚರ್ಚೆ ಇರುತ್ತದೆ. ಸರ್ವಾಧಿಕಾರದಲ್ಲಿ ಚರ್ಚೆಗೆ ಅವಕಾಶ ಇಲ್ಲ. ಏಕಮುಖವಾಗಿ "ನಾನು ಹೇಳ್ತೀನಿ–ನೀವು ಕೇಳಿ" ಎನ್ನುವುದಷ್ಟೆ. "ಮನ್ ಕಿ ಬಾತ್" ರೀತಿ ನಾನು ಹೇಳ್ತೀನಿ, ನೀವು ಕೇಳಿ ಅನ್ನೋದು ಸರ್ವಾಧಿಕಾರಿ ಧೋರಣೆ ಎಂದು ಟೀಕಿಸಿದರು.

ವಚನ ಎಂದರೆ ಮಾತು. ಶರಣರ ವಚನ ಜನರ ಭಾಷೆಯಲ್ಲಿವೆ. ಆದ್ದರಿಂದ ವಚನ ಸಾಹಿತ್ಯ, ಜನರ ಸಾಹಿತ್ಯ ಆಗಿದೆ. ಹಿಂದೆ ಸಂಸ್ಕೃತ ಕಲಿತರೆ ಕಲಿಯುವ ಶೂದ್ರರ ಕಿವಿಗೆ ಕಾದ ಸೀಸ ಉಯ್ಯುವ ಶಿಕ್ಷೆ ಇತ್ತು. ಇದರಿಂದಲೇ ಭಾರತೀಯ ಶೂದ್ರ ಸಮುದಾಯ ಅಕ್ಷರ ಸಂಸ್ಕೃತಿಯಿಂದ ವಂಚಿತರಾದರು. ಶಿಕ್ಷಣ ಇಲ್ಲದ ಕಾರಣಕ್ಕೆ ಅಸಮಾನತೆ ಬೆಳೆಯಿತು ಎಂದರು.

"ನಮ್ಮ ಸಂವಿಧಾನ ವೈರುಧ್ಯತೆ ಇರುವ ಸಮಾಜದಲ್ಲಿಜಾರಿಯಾಗುತ್ತಿದೆ.ಪ್ರಜಾಪ್ರಭುತ್ವದ ಕಾರಣದಿಂದ ರಾಷ್ಟ್ರಪತಿಯಿಂದ ಪೌರ ಕಾರ್ಮಿಕರವರೆಗೂ "ಎಲ್ಲರಿಗೂ ಒಂದೇ ಮತ ಎನ್ನುವ ರಾಜಕೀಯ ಸ್ವಾತಂತ್ರ್ಯ ಸಿಕ್ಕಿದೆ. ಆದರೆ, ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಇನ್ನೂ ಸಿಕ್ಕಿಲ್ಲ. ಇದು ಸಿಗದೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥ ಇಲ್ಲ ಎನ್ನುವ ಅಂಬೇಡ್ಕರ್ ಅವರ ಮಾತನ್ನು ಉಲ್ಲೇಖಿಸಿದರು.

ಇವನಾರವ ಇವನಾರವ ಎಂದು ವಚನ ಹೇಳೋದು, ಈ ಕಡೆ ಬಂದು ಅವನು ಯಾವ ಜಾತಿ ಎಂದು ಕೇಳೋದು ನಡೆ–ಯುತ್ತಿದೆ. ಹೀಗಾದರೆ ಬಸವಣ್ಣನವರ ಆಶಯದಂತೆ ಜಾತಿ ನಿರ್ಮೂಲನೆ ಆಗಲ್ಲ. ಜಾತಿಗೆ ಚಲನೆಯಿಲ್ಲ.

ವರ್ಗಕ್ಕೆ ಚಲನೆ ಇದೆ. ಎಲ್ಲಾ ಜಾತಿಗಳಿಗೂ ಆರ್ಥಿಕ ಚಲನೆ ಸಿಕ್ಕಾಗ ಮಾತ್ರ ಜಾತಿ ನಿರ್ಮೂಲನೆ ಸಾಧ್ಯ ಎಂದರು.

ಇವನಾರವ ಇವನಾರವ ಎಂದು ವಚನ ಹೇಳುತ್ತಲೇ ಜಾತಿ ಮಾಡುವವರು ಇದ್ದಾ–ರೆ. ಬಸವಣ್ಣನವರು ಮತ್ತು ಶರಣರು ಕರ್ಮಸಿದ್ಧಾಂತದ ವಿರುದ್ಧ ಹೋರಾಟ ನಡೆಸಿದರು. ಆದರೆ ಈಗ ಶಿಕ್ಷಣ ಪಡೆದವರೇ ಜನ್ಮಜನ್ಮಗಳಲ್ಲಿನಂಬಿಕೆಇಟ್ಟುಕರ್ಮಸಿದ್ಧಾಂತ ಆಚರಿಸುತ್ತಿದ್ದಾರೆ. ಒಂದು ಕಡೆ ಬಸವ ಜಯಂತಿ ಆಚರಿಸೋದು ಮತ್ತೊಂದು ಕಡೆ ಕರ್ಮಸಿದ್ಧಾಂತಆಚರಿಸೋದು ಮಾಡಿದರೆ ಬಸವ ಜಯಂತಿಗೆ ಅರ್ಥ ಇಲ್ಲ ಎಂದರು.

ಬಸವಣ್ಣ ಅರ್ಥ ಆಗ್ಬೇಕು ಅಂದ್ರೆ ಮೊದಲು ಕರ್ಮಸಿದ್ಧಾಂತ ಮತ್ತು ಹಣೆಬರಹ ಎನ್ನುವ ಮೌಢ್ಯವನ್ನು ಬಿಡುವ ಶಪಥ ಮಾಡಬೇಕು ಎಂದು ಕರೆ ನೀಡಿದರು.

ಆಚಾರವೇ ಸ್ವರ್ಗ–ಅನಾಚಾರವೇ ನರಕ ಎನ್ನುವ ಬಸವಣ್ಣನವರ ಮೌಲ್ಯ ಪಾಲಿಸುವ ಶಪಥ ಮಾಡಿ ನೋಡೋಣ. ಧರ್ಮ ಎಂದರೆ ಭಯಾನಕವಾಗಿ ರಾಶಿ ರಾಶಿ ಏನೇನೋ ಹೇಳ್ತಾರೆ. ಇದ್ಯಾವುದೂ ಧರ್ಮ ಅಲ್ಲ. ಬಸವಣ್ಣನವರು ಬಹಳ ಸರಳವಾಗಿ "ದಯೆಯೇ ಧರ್ಮದ ಮೂಲವಯ್ಯ" ಎಂದಿದ್ದಾರೆ. ಇಷ್ಟು ಸರಳ ಮತ್ತು ಸುಂದರವಾದ ಮೌಲ್ಯವೇ ಧರ್ಮ ಎಂದರು.

ಬಸವಣ್ಣನವರ ಆಶಯಗಳು, ಬಸವಣ್ಣನವರ ಮೌಲ್ಯಗಳು, ಅಂಬೇಡ್ಕರ್ ಅವರ ಸಂವಿಧಾನದ ಆಶಯ ಮತ್ತು ಮೌಲ್ಯಗಳು ಒಂದೇ ಆಗಿವೆ. ಇದನ್ನು ಅರ್ಥ ಮಾಡಿಕೊಂಡು, ಪಾಲಿಸದೇ ಹೋದರೆ ಕೇವಲ ಬಸವಣ್ಣನವರ ಬಗ್ಗೆ ಭಾಷಣ ಮಾಡುವುದರಿಂದ ಸಮಾಜಕ್ಕೆ ಏನೂ ಒಳ್ಳೆಯದು ಮಾಡಲು ಸಾಧ್ಯವಿಲ್ಲ ಎಂದರು.

ಗೋರುಚ ಅವರ ಸಮಿತಿ ವರದಿಯಂತೆ ಅನುಭಾವಿಗಳ ಅನುಭವ ಮಂಟಪ ಮಾಡುವ ಕೆಲಸ ಆಗಿದ್ದು ನಮ್ಮಿಂದ. ಇದನ್ನು ಈ ವರ್ಷವೇ ಪೂರ್ಣಗೊಳಿಸುತ್ತೇವೆ.

ಬಸವಣ್ಣರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದ್ದು ನಾವೇ. ಅಕ್ಕಮಹಾದೇವಿ ವಿಶ್ವ ವಿದ್ಯಾಲಯ ನಾಮಕಾರಣ ಮಾಡಿದ್ದು ನಾವೇ ಎಂದರು.

ಕನಕದಾಸರು, ಬಸವಣ್ಣ ಇಬ್ಬರೂ ಸಂಸ್ಕೃತದಲ್ಲಿ ಏನೂ ಹೇಳಲಿಲ್ಲ. ಜನರ ಭಾಷೆಯಲ್ಲಿ, ಜನರಿಗೆ ಅರ್ಥ ಆಗುವ ರೀತಿ ಅತ್ಯಂತ ಸರಳವಾಗಿ ಧರ್ಮ ಮತ್ತು ಮೌಲ್ಯವನ್ನು ಸಾರಿದರು. ಯಾವ ಭಾಷೆಯನ್ನಾದರೂ ಕಲಿಯಿರಿ. ಆದರೆ ಜನರಾಡುವ ಭಾಷೆಯಲ್ಲಿ ಮಾತನಾಡಿ, ಮೌಲ್ಯಗಳನ್ನು ವಿವರಿಸಿ ಎಂದರು.

ಮಾತೃಭಾಷೆ, ತಾಯಿ ಭಾಷೆ, ನಮ್ಮ ನೆಲದ ಭಾಷೆಯಲ್ಲಿ ಬಸವಾದಿ ಶರಣರು ತಮ್ಮ ಅನುಭಾವಗಳನ್ನು ಜನರಿಗೆ ತಿಳಿಸಿದ್ದನ್ನು ವಿವರಿಸಿದರು.

ಬಸವಾದಿ ಶರಣರ ಆಶಯ ಮತ್ತು ಮೌಲ್ಯಗಳನ್ನು ನಾನು ಜಾರಿಗೆ ತರಲು ಮುಂದಾದರೆ ಅದಕ್ಕೂ ಅಡ್ಡಿಪಡಿಸುವವರು, ವಿರೋಧಿಸುವವರು ಇದ್ದಾರೆ. ಆದ್ದರಿಂದ ಸಮ ಸಮಾಜ ಬೇಕೋ, ಜಾತಿ ಸಮಾಜ ಬೇಕೋ ಎನ್ನುವ ನಿರ್ಧಾರವನ್ನು ನಿಮಗೇ ಬಿಡುತ್ತೇನೆ ಎಂದರು.

ದೇವರಿಗೂ ಜನರಿಗೂ ನಡುವೆ ಮಧ್ಯವರ್ತಿಗಳು ಇರಬಾರದು ಎನ್ನುವುದೇ ಬಸವಣ್ಣನವರ ಮಾತಾಗಿತ್ತು. ಅದ–ಕ್ಕೇ ದೇಹವೇ ದೇಗುಲ ಎಂದು ವಚನ ರಚಿಸಿದರು ಎಂದರು.

ಬಸವಾದಿ ಶರಣರ ಆಶಯದಂತೆ ಇಷ್ಟಲಿಂಗ ಪೂಜೆ ಮಾಡುವಾಗಲಾದರೂ ಮಧ್ಯವರ್ತಿಗಳು ಇರಬಾರದು ಎಂದರು.

ಮನುವಾದಿಗಳು ಬಸವತತ್ವದ ವಿರೋಧಿಗಳು. ಮನುಷ್ಯ ತತ್ವಕ್ಕೆ ವಿರುದ್ಧ ಇರುವವರು ಮನುವಾದಿಗಳು. ಮನುಷ್ಯತ್ವ ಪಾಲಿಸುವವರು ಬಸವವಾದಿಗಳು. ಆಯ್ಕೆ ನಿಮ್ಮದು. ಮನುವಾದಿಗಳು ಬೇ–ಕೋ, ಬಸವವಾದಿಗಳು ಬೇಕೋ ನೀವೇ ನಿರ್ಧರಿಸಿ ಎಂದರು.

ಪ್ರಜಾಪ್ರಭುತ್ವ ಹುಟ್ಟಿದ್ದು ಇಂಗ್ಲೆಂಡ್ ನಲ್ಲಿ ಅಲ್ಲ. 900 ವರ್ಷಗಳ ಹಿಂದೆ ಸ್ಥಾಪಿತವಾದ ಅನುಭವ ಮಂಟಪವೇ ಮೊದಲ ಪ್ರಜಾಪ್ರಭುತ್ವ ಕೇಂದ್ರ ಎಂದರು.

ಆರ್ಥಿಕ ಅಸಮಾನತೆ ಗುಲಾಮಗಿರಿ ಬೆಳೆಸುತ್ತದೆ. ಸ್ವಾಭಿಮಾನ ಅಳಿಸುತ್ತದೆ. ಕಾಯಕ ಮತ್ತು ದಾಸೋಹ ಬಸವಾದಿ ಶರಣರು ನಮಗೆ ಕೊಟ್ಟಿರುವ ಆರ್ಥಿಕ ಸಿದ್ಧಾಂತ. ಇದನ್ನು ಪಾಲಿಸಿದರೆ ಮಾತ್ರ ಬಸವ ಜಯಂತಿ ಆಚರಣೆಗೆ ಅರ್ಥ ಬರುತ್ತದೆ ಎಂದರು.

ಕಲ್ಯಾಣಮ್ಮ ಜನಸ್ಥಳವನ್ನು ಅಭಿವೃದ್ಧಿ ಪಡಿಸಲಾಗಿವುದು,ಬಸವಣ್ಣನೀಲಾಂಬಿಕೆಯ ವಿಗ್ರಹವನ್ನೂಮಾಡಿಸೋಣ. ಇವೆಲ್ಲವನ್ನೂ ನಾವು ಮಾಡ್ತೀವಿ. ಆದರೆ ನೀವೂ ಸ್ವಲ್ಪ ಬದಲಾಗಿ, ಎಲ್ಲರನ್ನೂ "ಇವ ನಮ್ಮವ" ಎನ್ನಿ ಎಂದು ಕರೆ ನೀಡಿದರು.

ಸಚಿವರಾದ ಎಂ.ಬಿ.ಪಾಟೀಲ್, ಆರ್.ಬಿ.ತಿಮ್ಮಾಪುರ, ಶಿವರಾಜ್ ತಂಗಡಗಿ ಸೇರಿ ಹಲವು ಪ್ರಮುಖರು ಉಪಸ್ಥಿತರಿದ್ದರು.

# ಬೇಸಿಗೆ ಅವಧಿಯಲ್ಲಿ 60 ದಿನಗಳ ನಿರಂತರ ನರೇಗಾ ಕೂಲಿ ಕೆಲಸ ನಿರ್ವಹಿಸಿ: ಪ್ರಕಾಶ್ ವಿ.



**ಕೊಪ್ಪಳ:**ಪ್ರಸ್ತುತಬೇಸಿಗೆಇರುವದರಿಂದಪ್ರತಿಯೊಂದು ಕುಟುಂಬವು ಗ್ರಾಮ ಪಂಚಾಯತಿಯಿಂದ ನೀಡುವ ನರೇಗಾ ಕೆಲಸದಲ್ಲಿ ಭಾಗವಹಿಸಿ 60 ದಿನಗಳ ಕೂಲಿ ಕೆಲಸ ನಿರ್ವಹಿಸಿರೆಂದು ಕೊಪ್ಪಳ ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ಪ್ರಕಾಶ್ ವಿ. ಅವರು ಕರೆ ನೀಡಿದರು.

ಅವರು ಮಂಗಳವಾರ ಹಲಗೇರಿ ಗ್ರಾಮ ಪಂಚಾಯತಿಯಿಂದ ಮಹಾತ್ಮಾ ಗಾಂಧಿ ನರೇಗಾ ಯೋಜನೆಯಡಿ ಹಲಗೇರಿ ಗ್ರಾಮದ ಪುಟ್ಟಪ್ಪನ ಕೆರೆ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಭೇಟಿ ಪರಿಶೀಲಿಸಿ ಮಾತನಾಡಿದರು.

ನರೇಗಾ ಯೋಜನೆಯು ಗ್ರಾಮೀಣ ಭಾಗದ ಕೂಲಿಕಾರರಿಗೆ ಕೂಲಿ ಕೆಲಸ ಒದಗಿಸುವ ಯೋಜನೆಯಾಗಿದ್ದು, ಇಲ್ಲಿ ಕೆಲಸದಲ್ಲಿ ನಿರತರಾದ ಪ್ರತಿ ಕುಟುಂಬವು 60 ದಿನಗಳ ನಿರಂತರವಾಗಿ ಕೂಲಿ ಕೆಲಸ ನಿರ್ವಹಿಸಬಹುದು. ಪ್ರತಿಯೊಬ್ಬರು ರೂ.370 ಕೂಲಿ ಬರುವಂತೆ ಕೂಲಿ ಕೆಲಸ ನಿರ್ವಹಿಸಬೇಕು. ಪ್ರಸ್ತುತ ಬೇಸಿಗೆ ಇರುವದರಿಂದ ಕೆಲಸದ ಪ್ರಮಾಣದಲ್ಲಿ ಶೇ.30ರಷ್ಟು ವಿನಾಯಿತಿ ನೀಡಲಾಗಿದೆ. ಕಳೆದ ಸಾಲಿನಲ್ಲಿ ರೂ.349 ಇದ್ದ ಕೂಲಿ ಮೊತ್ತವನ್ನು ಪ್ರಸ್ತುತ ರೂ.370 ಕ್ಕೆ ಹೆಚ್ಚಿಸಿದ್ದು, ನಿಮಗೆ ನೀಡಿರುವ ಅಳತೆಗನುಗುಣವಾಗಿ ಕೆಲಸ ನಿರ್ವಹಿಸಬೇಕೆಂದರು.

ಬಿಸಲಿನ ಪ್ರಮಾಣದ ಬಹಳಷ್ಟು ಇರುವದರಿಂದ ಕೂಲಿ ಕೆಲಸಕ್ಕೆ ಬರುವ ಎಲ್ಲಾ ಪಾಲಕರು ತಮ್ಮ 6 ತಿಂಗಳಿನಿಂದ 3 ವರ್ಷದೊಳಗಿ ಮಕ್ಕಳನ್ನು ಕಾಮಗಾರಿ ಸ್ಥಳಕ್ಕೆ ಕರೆದುಕೊಂಡು ಬರದೇ ಗ್ರಾಮದಲ್ಲಿರುವ ಕೂಸಿನ ಮನೆಗೆ ಮಕ್ಕಳನ್ನು ಸೇರ್ಪಡೆ ಮಾಡಬೇಕು. ಪ್ರತಿಯೊಬ್ಬರಿಗೂ 6 ಪೂಟ್ ಉದ್ದ, 6 ಅಗಲ, 1 ಪೂಟ್ ಆಳ ಕೆಲಸ ನಿರ್ವಹಿಸಿದಲ್ಲಿ ಎಲ್ಲರಿಗೂ ರೂ.370 ಕೂಲಿ ಬರುತ್ತದೆ ಎಂದು ಹೇಳಿದರು.

ಮಹಿಳಾ ಕೂಲಿಕಾರರೊಂದಿಗೆ ಸಂವಾದ: ಕೆರೆ ಕಾಮಗಾರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳಾ ಕೂಲಿಕಾರರೊಂದಿಗೆ ಜಿ.ಪಂ ಯೋಜನಾ ನಿರ್ದೇಶಕರು ಸಂವಾದ ನಡೆಸಿ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಕೆಲಸಕ್ಕೆ ಹಾಜರಾಗಿ ಮಹಿಳಾ ಭಾಗವಹಿಸುವಿಕೆ ಹೆಚ್ಚಳವಾಗಬೇಕು ಎಂದರು. ಬಳಿಕ ಕೆರೆ ಕಾಮಗಾರಿಯಲ್ಲಿ ಕೆಲಸ ನಿರ್ವಹಿಸಿರುವ ಕುರಿತು ಎನ್.ಎಂ.ಎಂ.ಎಸ್ ನಲ್ಲಿ ಹಾಜರಾತಿಯನ್ನು ಸೆರೆ ಹಿಡಿದು ಅಪಲೋಡ್ ಮಾಡಿರುವ ಕುರಿತು ಆನ್‌ಲೈನ್ ಹಾಜರಾತಿಯನ್ನು ಖುದ್ದಾಗಿ ಪರಿಶೀಲಿಸಿದರು.

ಹಲಗೇರಿಕೂಸಿನಮನೆಪರಿವೀಕ್ಷಣೆ:ಹಲಗೇರಿಗ್ರಾಮದ ಕೂಸಿನ ಮನೆಗೆ ಜಿ.ಪಂ ಯೋಜನಾ ನಿರ್ದೇಶಕರು ಭೇಟಿ ನೀಡಿದರು. ಮಕ್ಕಳು ದಾಖಲಾಗಿರುವ ಕುರಿತು ಕೇರ್ ಟೇಕರ್ಸ್‌ಗಳು ಮಾಹಿತಿ ನೀಡಿದರು. ಪ್ರಸ್ತುತ 15 ಮಕ್ಕಳು ಪ್ರತಿ ದಿನ ಕೂಸಿನ ಮನೆಗೆ ಬರುತ್ತಿದ್ದು, ಬೆಳಿಗ್ಗೆ ಹಾಲು, ಬಾಳೆಹಣ್ಣು, ದಾಲ್ ಖಿಚಡಿ, ಹೆಸರು ಬೇಳೆ ಪಾಯಸ, ಶಾವಿಗೆ ಪಾಯಸ, ಮೊಟ್ಟೆ ನೀಡುತ್ತಿರುವ ಕುರಿತು ವಿವರಿಸಿದರು. ಮಕ್ಕಳ ಆರೋಗ್ಯ ತಪಾಸಣೆ ಜರುಗಿಸಬೇಕೆಂದು ಜಿ.ಪಂ ಯೋಜನಾ ನಿರ್ದೇಶಕರು ಹೇಳಿದರು.

ಬಿಸರಳ್ಳಿ ಗ್ರಾಮ ಪಂಚಾಯತಿ ಹಾಗೂ ನರೇಗಾ ದತ್ತು ಗ್ರಾಮ ಮೊರನಾಳಕ್ಕೆ ಭೇಟಿ: ಬಿಸರಳ್ಳಿ ಗ್ರಾಮ ಪಂಚಾಯತಿಗೆ ಜಿ.ಪಂ ಯೋಜನಾ ನಿರ್ದೇಶಕರು ಭೇಟಿ ನೀಡಿ, ನರೇಗಾ ಕೂಲಿಕಾರರಿಗೆ ಕೂಲಿ ಕೆಲಸ ನೀಡುವಂತೆ ಗ್ರಾ.ಪಂ ಅಧಿಕಾರಿಗಳಿಗೆ ಸೂಚಿಸಿದರು. ಪ್ರಧಾನಮಂತ್ರಿ ಆವಾಸ್ ಪ್ಲಸ್ ಸಮೀಕ್ಷೆಯನ್ನು ವಸತಿ ರಹಿತ ಯಾವುದೇ ಕುಟುಂಬವು ಹೊರಗುಳಿಯದಂತೆ ಜಿ.ಪಿ.ಎಸ್ ಮಾಡಬೇಕೆಂದು ಗಣಕಯಂತ್ರ ನಿರ್ವಾಹಕರಿಗೆ ಸೂಚಿಸಿದರು. ಬಳಿಕ ಸಂಸದರ ನರೇಗಾದತ್ತುಗ್ರಾಮಮೋರನಾಳಗ್ರಾಮಕ್ಕೆಭೇಟಿನೀಡಿ, ನರೇಗಾ ಯೋಜನೆಯ ಶಾಲಾ ಕಂಪೌಂಡ, ಶಾಲಾ ಶೌಚಾಲಯ, ಅಡುಗೆ ಕೋಣೆ ಮತ್ತು ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆಯಿಂದ ಅನುಷ್ಠಾನಿಸುತ್ತಿರುವ ಪ್ರಗತಿಯಲ್ಲಿರುವ ನಮ್ಮ ಹೊಲ ನಮ್ಮ ರಸ್ತೆ ಕಾಮಗಾರಿಗಳನ್ನು ವೀಕ್ಷಿಸಿದರು.

ಈ ಸಂದರ್ಭದಲ್ಲಿ ತಾಲೂಕ ಪಂಚಾಯತ ನರೇಗಾ ಸಹಾಯಕ ನಿರ್ದೇಶಕ ಯಂಕಪ್ಪ, ಬಿಸರಳ್ಳಿ ಗ್ರಾಮ ಪಂಚಾಯತ ಅಧ್ಯಕ್ಷರಾದ ರಮೇಶರಡ್ಡಿ, ಹಲಗೇರಿ ಪಂಚಾಯತ ಅಭಿವೃದ್ಧಿ ಅಧಿಕಾರಿ ಅಶೋಕ ರಾಂಪುರ, ತಾಲೂಕ ಐಇಸಿ ಸಂಯೋಜಕ ದೇವರಾಜ ಪತ್ತಾರ, ತಾಂತ್ರಿಕ ಸಂಯೋಜಕ ಯಮನೂರ, ಗ್ರಾಮ ಪಂಚಾಯತ ಕಾರ್ಯದರ್ಶಿ ದೊಡ್ಡನಗೌಡ, ತಾಂತ್ರಿಕ ಸಹಾಯಕ ಪ್ರವೀಣ ಗದಗ ಹಾಗೂ ಗ್ರಾಮ ಪಂಚಾಯತ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಪಹಲ್ಗಾಮ್ ಭಯೋತ್ಪಾದಕ ಕೃತ್ಯ ಖಂಡಿಸಿ ಅಥಣಿ ಬೀದಿಬದಿ ವ್ಯಾಪಾರಸ್ಥರಿಂದ ತೀವ್ರ ಪ್ರತಿಭಟನೆ




**ಅಥಣಿ :** ಜಮ್ಮು ಕಾಶ್ಮೀರದ ಪಹೆಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರು ನಡೆಸಿದ ದಾಳಿಯನ್ನು ಖಂಡಿಸಿ, ಪಟ್ಟಣದ ಬೀದಿಬದಿ ವ್ಯಾಪಾರಿಗಳ ಸಂಘದಿಂದ ಶುಕ್ರವಾರ ರಾತ್ರಿ ಕ್ಯಾಂಡಲ್ ಮಾರ್ಚ್ ಮೂಲಕ ಪ್ರತಿಭಟನೆ ನಡೆಸಲಾಯಿತು. ಇದೇ ವೇಳೆ ದಾಳಿಯಲ್ಲಿ ಮೃತರಾದವರಿಗೆ ಮೌನಾಚರಣೆ ಮಾಡುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಅಮಾಯಕ ಜನರ ಸಾವಿಗೆ ಕಾರಣರಾದ ಉಗ್ರರಿಗೆ ಹಾಗೂ ಕೃತ್ಯ ನಡೆಸಲು ಸಹಕರಿಸಿದವರಿಗೆ ತಕ್ಕ ಶಿಕ್ಷೆ ನೀಡಬೇಕು ಎಂದು ಪ್ರತಿಭಟನಾಕಾರರು ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಮನ್ಸೂರ್ ಬಾಗವಾನ ಮಾತನಾಡಿಈದಾಳಿಯುಮಾವೀಯತೆಯ ಮೇಲಿನ ದಾಳಿಯಾಗಿದ್ದು ಭಾರತದಲ್ಲಿರುವ ನಾವು ಹಿಂದೂ ಮುಸ್ಲಿಂ ಬಾಯಿ ಬಾಯಿ ಎಂದು ವಿವಿಧತೆಯಲ್ಲಿ ಏಕತೆಯಿಂದ ಬದುಕುತ್ತಿದ್ದು

ಶಾಂತಿ ಕದಡುವ ಹುನ್ನಾರವನ್ನು ನಡೆಸುತ್ತಿರುವ ಕೆಲವು ಕ್ಷುದ್ರಶಕ್ತಿಗಳನ್ನು ಕೇಂದ್ರಸರ್ಕಾರಕೂಡಲೇಸೆದೆಬಡಿಯುವ ಕೆಲಸವನ್ನು ಮಾಡಬೇಕು ಮತ್ತು ಇಂತಹ ವಿಧ್ವಂಸಕ ಕೃತ್ಯದಲ್ಲಿ ತೊಡಗಿದವರನ್ನು ಸಾಧ್ಯವಾದರೆ ಬಂಧಿಸಿ ಸಾರ್ವಜನಿಕವಾಗಿ ಅವರ ದೇಹದ ಅಂಗಗಳನ್ನು ಕತ್ತರಿಸುವ ಮೂಲಕ ಕಠಿಣ ಕ್ರಮ ಕೈಗೊಳ್ಳುವ ಮೂಲಕ ಭಯೋತ್ಪಾದನೆ ಕೃತ್ಯಕ್ಕೆ ಕಠಿಣ ಶಿಕ್ಷೆ ಇದೆ ಎಂಬುದನ್ನು ಸಾಬೀತು ಮಾಡಬೇಕು ಎಂದು ಸರ್ಕಾರವನ್ನು ಆಗ್ರಹಿಸಿದ ಅವರು ಉಗ್ರವಾದವನ್ನು ಬೇರು ಸಹಿತ ಕಿತ್ತೆಸೆಯಲು ಸರ್ಕಾರ ಕಠಿಣ ಕ್ರಮಗಳನ್ನು ಜಾರಿಗೊಳಿಸುತ್ತಿದ್ದು ಅದಕ್ಕೆ ಸಮಸ್ತ ಭಾರತೀಯರು ಬೆಂಬಲವಾಗಿ ನಿಲ್ಲಬೇಕು ಎಂದರು.

ಈ ಪ್ರತಿಭಟನೆಯಲ್ಲಿ ಅಥಣಿ ಪಟ್ಟಣದ ನೂರಾರು ಬೀದಿಬದಿಯ ವ್ಯಾಪಾರಸ್ಥರು ಭಾಗಿಯಾಗಿದ್ದು ಪಟ್ಟಣದ ಹಂಜಿ ಆಸ್ಪತ್ರೆಯಿಂದ ಪ್ರಾರಂಭವಾದ ಕ್ಯಾಂಡಲ್ ಮಾರ್ಚ್ ಪ್ರತಿಭಟನೆಯು ಅಂಬೇಡ್ಕರ್ ವೃತ್ತದಲ್ಲಿ ಜಮಾವಣೆಗೊಂಡು ಮೌನಾಚರಣೆ ಮಾಡುವ ಮೂಲಕ ಸಮಾರೋಪಗೊಂಡಿತು.

ಈ ವೇಳೆ ಬೀದಿ ಬದಿ ವ್ಯಾಪಾರಿಗಳ ಮಹಾನಿಂಗ ಭಜಂತ್ರಿ, ಕಾರ್ಯದರ್ಶಿ ಶ್ರೀನಿವಾಸ ಶೆಟ್ಟಿ. ಖಜಾಂಚಿ ರಜಾಕಸಾಬ ಭಾಗವಾನ ಮತ್ತು ಬೀದಿ ಬದಿ ವ್ಯಾಪಾರಸ್ಥರಾದ ವಸೀಮ್ ಪಟವೇಗಾರ, ರಾಘವೇಂದ್ರ ಪಟ್ಟಣ, ಶ್ರೀಕಾಂತ ಭಜಂತ್ರಿ, ಯುನೂಸ್‌ಭಾಗವಾನ,ಗುಲಾಬ್‌ಕಾಂಬಳೆ, ಚಂದ್ರಕಾಂತ ಭಜಂತ್ರಿ ಸಲಾವುದ್ದೀನ ರಾಮಪೂರೆ, ಫಯಾಜ ಸಾತಬಚ್ಚೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಪ್ರವಚನ ಎಂದರೆ ಕೇವಲ ಉಪದೇಶವಲ್ಲ, ಜ್ಞಾನದ ಹೊನಲು. ಅನುಭವದ ಸಾರ: ಸಿದ್ಧಬಸವ ಕಬೀರಶ್ರೀ




**ಅಥಣಿ :** ಆಧ್ಯಾತ್ಮ ಎಂದರೆ ಕೇವಲ ಧಾರ್ಮಿಕ ಆಚರಣೆಗಳು ಅಥವಾ ಪೂಜೆ ಪುನಸ್ಕಾರಗಳಲ್ಲ. ಅದು ನಮ್ಮ ಅಂತರಂಗದ ಆಳಕ್ಕೆ ಇಳಿದು, ಜೀವನದ ನಿಜವಾದ ಅರ್ಥವನ್ನು ಕಂಡುಕೊಳ್ಳುವ ಒಂದು ಪಯಣ ಎಂದು ಚಿಗರಿಹಳ್ಳಿಯ ಜಗದ್ಗುರು ಮರುಳ ಶಂಕರ ದೇವರ ಗುರುಪೀಠದ ಸಿದ್ಧಬಸವ ಕಬೀರ ಸ್ವಾಮೀಜಿ ಹೇಳಿದರು.

ಅವರು ತಾಲೂಕಿನ ತೆಲಸಂಗ ಗ್ರಾಮದ ನಂದಿ ಬಸವೇಶ್ವರ ದೇವಸ್ಥಾನದ ನೂತನ ಕಟ್ಟಡ ಉದ್ಘಾಟನೆ ನಿಮಿತ್ತಶರಣರಜೀವನದರ್ಶನಪ್ರವಚನಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಪ್ರವಚನ ಎಂದರೆ ಕೇವಲ ಉಪದೇಶವಲ್ಲ, ಅದು ಜ್ಞಾನದ ಹೊನಲು, ಅನುಭವದ ಸಾರ ಮತ್ತು ಜೀವನವನ್ನು ಬೆಳಗುವ ದೀಪ. ಪ್ರತಿಯೊಬ್ಬ ಮನುಷ್ಯನ ಒಳಗೂ ಒಂದು ಪ್ರಶ್ನೆ ಇದ್ದೇ ಇರುತ್ತದೆ. ನಾನು ಯಾರು ?.. ನನ್ನ ಜೀವನದ ಉದ್ದೇಶವೇನು ?.. ಸತ್ಯ ಎಂದರೇನು ?..

ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಹಾದಿಯೇ ಆಧ್ಯಾತ್ಮ ಚಿಂತನೆ. ಜೀವನದ ಓಟದಲ್ಲಿ ನಾವು ಭೌತಿಕ ಜಗತ್ತಿನ ಆಕರ್ಷಣೆಗಳಿಗೆ ಒಳಗಾಗುತ್ತೇವೆ. ಹಣ, ಅಧಿಕಾರ, ಅಂತಸ್ತು. ಸ್ಥಾನಮಾನ ಇವುಗಳನ್ನು ಪಡೆಯಲು ಹಂಬಲಿಸುತ್ತೇವೆ. ಆದರೆ ಇವೆಲ್ಲವೂ ಕ್ಷಣಿಕವಾದವು. ನಿಜವಾದ ಶಾಂತಿ ಮತ್ತು ನೆಮ್ಮದಿ ನಮ್ಮ ಅಂತರಂಗದಲ್ಲಿದೆ. ಅದನ್ನು ಅರಿಯಲು ನಾವು ನಮ್ಮ ಮನಸ್ಸನ್ನು ಶಾಂತಗೊಳಿಸಬೇಕು, ನಮ್ಮ ಆಲೋಚನೆಗಳನ್ನು ನಿಯಂತ್ರಿಸಬೇಕು. ಆಧ್ಯಾತ್ಮ ಚಿಂತನೆಯು ನಮಗೆ ಸ್ವಯಂ ಅರಿವನ್ನು ನೀಡುತ್ತದೆ. ನಮ್ಮ ದೌರ್ಬಲ್ಯಗಳು ಮತ್ತು ಸಾಮರ್ಥ್ಯಗಳನ್ನು ನಾವು ಗುರುತಿಸಲು ಸಹಾಯ ಮಾಡುತ್ತದೆ. ನಮ್ಮ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳನ್ನು ಸಮತೋಲನದಲ್ಲಿ ಇಟ್ಟುಕೊಳ್ಳಲು ಕಲಿಸುತ್ತದೆ ಎಂದರು.

ಬಸವಣ್ಣನವರುಪ್ರತಿಪಾದಿಸಿದ"ಕಾಯಕವೇಕೈಲಾಸ" ಎಂಬುದು ಬಹಳ ಮುಖ್ಯವಾದದ್ದು. ಈ ಮಾತಿನ ಅರ್ಥ ಕೇವಲ ದುಡಿಯುವುದಲ್ಲ, ಬದಲಾಗಿ ನಮ್ಮ ವೃತ್ತಿಯನ್ನುಶ್ರದ್ಧೆ, ಪ್ರಾಮಾಣಿಕತೆ ಮತ್ತು ಸಮರ್ಪಣಾ ಭಾವದಿಂದ ಮಾಡುವುದಾಗಿದೆ. ಯಾವುದೇ ಕಾಯಕವು ಕೀಳಲ್ಲ, ಎಲ್ಲ ಕೆಲಸಗಳಿಗೂ ಅದರದ್ದೇ ಆದ ಮಹತ್ವವಿದೆ. ನಾವು ಮಾಡುವ ಕೆಲಸವನ್ನು ದೇವರ ಪೂಜೆಯಂತೆ ಭಾವಿಸಿದರೆ, ಅದೇ ನಮಗೆ ಕೈಲಾಸವಾಗುತ್ತದೆ. ಬಸವಣ್ಣನವರ ಜೀವನ ಮತ್ತು ವಚನಗಳು ನಮಗೆ ಸದಾ ಸ್ಫೂರ್ತಿ. ಅವರ ತತ್ವಗಳನ್ನು ಪಾಲಿಸುವ ಮೂಲಕ ನಾವು ಅವರಿಗೆ ನಿಜವಾದ ಗೌರವ ಸಲ್ಲಿಸೋಣ ಎಂದು ಹೇಳಿದರು

ವಿರಕ್ತ ಮಠದ ಬಸವಲಿಂಗ ಸ್ವಾಮೀಜಿ ಮಾತನಾಡಿ, ಆಧ್ಯಾತ್ಮಿಕ ಜೀವನವು ಕಷ್ಟಗಳಿಂದ ಮುಕ್ತವಾಗಿರುವುದಿಲ್ಲ. ಆದರೆ ಆ ಕಷ್ಟಗಳನ್ನು ಎದುರಿಸುವ ಶಕ್ತಿ ಧೈರ್ಯ ಮತ್ತು ವಿವೇಕವನ್ನು ನಮಗೆ ನೀಡುತ್ತದೆ. ನಾವು ಜೀವನದ ಸವಾಲುಗಳನ್ನು ಶಾಂತವಾಗಿ ಮತ್ತು ಸಕಾರಾತ್ಮಕವಾಗಿ ಎದುರಿಸಲು ಸಾಧ್ಯವಾಗುತ್ತದೆ. ಆದ್ದರಿಂದ, ನಮ್ಮ ದೈನಂದಿನ ಜೀವನದಲ್ಲಿ ಸ್ವಲ್ಪ ಸಮಯವನ್ನು ಪ್ರವಚನವನ್ನು ಆಲಿಸುವುದಕ್ಕಾಗಿ ತೆಗೆದಿಡೋಣ ಎಂದರು.

ಹಿರೇಮಠದ ವೀರೇಶ್ವರ ದೇವರು ಮಾತನಾಡಿ, ವಿದ್ವಾಂಸರು ಮತ್ತು ಅನುಭವಿ ವ್ಯಕ್ತಿಗಳ ಚಿಂತನೆಗಳನ್ನು ಆಲಿಸುವುದರಿಂದ ನಮ್ಮ ಜ್ಞಾನದ ಪರಿಧಿ ವಿಸ್ತಾರವಾಗುತ್ತದೆ. ಅನೇಕ ಬಾರಿ ನಾವು ನಮ್ಮ ದೈನಂದಿನ ಜೀವನದ ಗಡಿಗಳಲ್ಲಿ ಸಿಲುಕಿ ನಮ್ಮ ದೃಷ್ಟಿಕೋನವನ್ನು ಕಳೆದುಕೊಳ್ಳುತ್ತೇವೆ. ಪ್ರವಚನಗಳು ನಮಗೆ ವಿಶಾಲವಾದ ದೃಷ್ಟಿಯನ್ನು ನೀಡುತ್ತವೆ. ಜೀವನದ ಸತ್ಯಾಸತ್ಯತೆಯನ್ನು. ಮೌಲ್ಯಗಳು ಮತ್ತು ಆದರ್ಶಗಳ ಬಗ್ಗೆ ನಾವು ಆಳವಾಗಿ ಚಿಂತಿಸಲು ಪ್ರೇರೇಪಿಸುತ್ತವೆ. ಪ್ರವಚನಗಳನ್ನು ಕೇಳುವುದು ಒಂದು ಸಂಪ್ರದಾಯ ಮಾತ್ರವಲ್ಲ, ಅದು ನಮ್ಮ ವೈಯಕ್ತಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಅತ್ಯಂತ ಅವಶ್ಯಕವಾದ ಒಂದು ಅಭ್ಯಾಸ. ಆದ್ದರಿಂದ ಎಲ್ಲರೂ ಪ್ರವಚನವನ್ನ ಆಲಿಸಬೇಕು ಎಂದರು

ಈ ಸಂದರ್ಭದಲ್ಲಿ ನಾಗಯ್ಯಾ ಮಠಪತಿ, ಸಾಬು ಜಮಖಂಡಿ, ತೆಲಸಂಗ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಾಗೂ ನ್ಯಾಯವಾದಿ ಅಮೋಘ ಖೊಬ್ರಿ, ರಮೇಶ ಗೋಂಧಳಿ, ದೀಲೀಪ ಹುಜರೆ, ಗ್ರಾಪಂ ಅಧ್ಯಕ್ಷೆ ಭಾರತಾ ಲೋಕಂಡೆ, ಉಪಾಧ್ಯಕ್ಷೆ ಅನೀತಾ ಕಂದಾರೆ ಸೇರಿದಂತೆ ಇತರರು ಇದ್ದರು.

# ಬೈಲಹೊಂಗಲದಲ್ಲಿ ಮೇ 4 ರಂದು ಗ್ರಂಥ ಲೋಕಾರ್ಪಣೆ ಹಾಗೂ ರಾಜ್ಯಮಟ್ಟದ ಕವಿಗೋಷ್ಠಿ

**ಬೈಲಹೊಂಗಲ:**ಬಸವಸಮಿತಿಬೆಂಗಳೂರು ಇವರ ವತಿಯಿಂದ ವಿಶ್ವ ಬಸವ ಜಯಂತಿ 2025 ರ ನಿಮಿತ್ಯ ಮಹಾನ್ ದಾರ್ಶನಿಕ ಬಸವಣ್ಣ ಗ್ರಂಥ ಲೋಕಾರ್ಪಣೆ ಹಾಗೂ ರಾಜ್ಯಮಟ್ಟದ ಕವಿಗೋಷ್ಠಿಯನ್ನು ಮೇ ನಾಲ್ಕರಂದು ರವಿವಾರ ಬೆಳಿಗ್ಗೆ ಹತ್ತು ಗಂಟೆಗೆ ಪಟ್ಟಣದಚೆನ್ನಮ್ಮಾಸಮಾಧಿರಸ್ತೆಯಲ್ಲಿರುವ ಗಣಾಚಾರಿ ಮಹಾವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಳಗಾವಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮಂಗಲಾ ಶ್ರೀಶೈಲ ಮೆಟಗುಡ್ಡ ವಹಿಸುವರು. ಬೆಂಗಳೂರಿನ ಬಸವ ಸಮಿತಿ ಅಧ್ಯಕ್ಷರಾದ ಅರವಿಂದ ಜತ್ತಿ ಗ್ರಂಥ ಲೋಕಾರ್ಪಣೆ ಮತ್ತು ಕವಿಗೋಷ್ಠಿ ಉದ್ಘಾಟನೆ ಮಾಡುವರು. ಬಸವ ಸಮಿತಿಯ ಕೇಂದ್ರ ಸಮಿತಿ ಸದಸ್ಯರಾದ ಮಹಾದೇವಪ್ಪ ಗುರುಲಿಂಗಪ್ಪ ವಾಲಿ, ಬೈಲಹೊಂಗಲದ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ವಿಜಯಲಕ್ಷ್ಮಿ ತೋಟಗಿ, ಅಖಿಲ ಭಾರತ ಲಿಂಗಾಯತ ವೀರಶೈವ ಮಹಾಸಭೆಯ ಬೈಲಹೊಂಗಲ ತಾಲೂಕು ಘಟಕದ ಅಧ್ಯಕ್ಷರಾದ ಡಾ. ಎ. ಎನ್. ಬಾಳಿ, ಜಾಗತಿಕ ಲಿಂಗಾಯತ ಮಹಾಸಭಾದ ಬೆಳಗಾವಿ ಜಿಲ್ಲೆ ಮಹಿಳಾ ಘಟಕದ ಅಧ್ಯಕ್ಷರಾದ ಪ್ರೇಮಕ್ಕ ಅಂಗಡಿ, ವಿಜಯಪುರದ ಅಕ್ಕಮಹಾದೇವಿ ವಿಶ್ವವಿದ್ಯಾಲಯದ ವಿದ್ಯಾವಿಷಯತ್ ಸದಸ್ಯರಾದ ಡಾ.ಚಂದ್ರಶೇಖರ ಗಣಾಚಾರಿ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕಾಧ್ಯಕ್ಷರಾದ ಎನ್. ಆರ್. ಠಕ್ಕಾಯಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕದ ಅಧ್ಯಕ್ಷರಾದ ಸಂತೋಷ ಕೊಳವಿ, ಜಾಗತಿಕ ಲಿಂಗಾಯತ ಮಹಾಸಭಾದ ಬೈಲಹೊಂಗಲ ನಗರ ಘಟಕ ಅಧ್ಯಕ್ಷರಾದ ಮಹೇಶ ಕೋಟಗಿ, ಕನ್ನಡ ಜನಪದ ಪರಿಷತ್ತಿನ ತಾಲೂಕಾಧ್ಯಕ್ಷರಾದ ಚಂದ್ರಶೇಖರ ರುದ್ರಪ್ಪ ಕೊಪ್ಪದ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸವದತ್ತಿ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿಗಳಾದ ಮಲ್ಲಿಕಾರ್ಜುನ ಕೋಳಿ, ಚಿಕ್ಕಬೆಳ್ಳಿಕಟ್ಟಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಧಾನ ಗುರುಗಳಾದ ಇಬ್ರಾಹಿಮ್ ಎಮ್. ಮುಲ್ಲಾ ಮುಖ್ಯ ಅತಿಥಿಗಳಾಗಿ ಆಗಮಿಸುವರು.

ಬೀರಪ್ಪ ಡಿ. ಡಂಬಳಿ, ರಾಜು ಎಂ. ಯಳಮೇಲಿ, ಬಸವರಾಜ ಚೋಳೆನಹಳ್ಳಿ, ಗುಡ್ಡಪ್ಪ ಎನ್.ಚಟ್ರಮ್ಮನವರ, ಶಂಕರಬಾಯಿ ನಿಂಬಾಳಕರ, ಸುಭಾಷ ಬಾಬು ಬಸ್ತವಾಡ, ಗೀತಾ ಅಶೋಕ ಶೇಠಿ, ಬಿ.ಡಿ.ಎಸ್. ರಾಜಪ್ಪ, ಶೈಲಜಾ ಎಂ. ಕೋರಿಶೆಟ್ಟರ, ಅರುಣಕುಮಾರ ರಾಜಮಾನೆ, ಅಶ್ವಿನಿ ಬಸವರಾಜ ಚಿಪ್ಪಲಕಟ್ಟಿ ಮಹಾಂತೇಶ ಹ. ಸೊಪ್ಪಿನವರು, ಸಂದೀಪ ಎಂ.ಪಿ., ಹೇಮಾ ಎನ್., ಯಶವಂತ ಮೇತ್ರಿ, ಶೇಖರಯ್ಯ ಟಿ. ಹೆಚ್. ಎಂ., ವೆಂಕಟೇಶ ಕೆ. ಜನಾದ್ರಿ, ರಮೇಶ ವೀ. ಹೂಗಾರ, ಆತ್ಮಾನಂದ ಅ. ಗೆದ್ದಿಕೇರಿ, ಅರುಣ ರೇವಣೆಪ್ಪ, ಬಂಕಾಪುರ, ಬಸಪ್ಪ ಹೊ.ಶೀಗಿಹಳ್ಳಿ, ಆನಂದ ಯಲ್ಲಪ್ಪ ಕೊಂಡಗುರಿ, ಗಂಗವ್ವಗು. ಮಠಪತಿ, ಶೀಲಾ ವಿ. ಕೋರಿಮಠ, ಶಿವಾನಂದ ಗು. ಮಠಪತಿ, ಮನೋಜಕುಮಾರ ಬಿ., ಮಧು ಕಾರಗಿ, ಯಂಕಪ್ಪ ಯ. ಅಂಬಿಗೇರ, ಸಂಜಯ ಜಿ. ಕುರಣಿ,ಅಕ್ಕಮಹಾದೇವಿನಾಡಗೌಡ,ರೇಖಾ ಜೋಶಿ, ಪ್ರೀತಿ ಪ್ರದೀಪ ತುಳಜಣ್ಣವರ, ಡಾ. ಭವ್ಯ ಅಶೋಕ ಸಂಪಗಾರ, ಮಲ್ಲಿಕಾರ್ಜುನ ಹ. ಕೆರೂಡಿ, ಹೇಮಾ ಮೊರಬ, ಗೌರಾ ಉ. ಹಾಲಭಾವಿ, ಯಶವಂತ ಭರಮಣ್ಣ ಉಚಗಾಂವಕರ, ಮಹಾಂತೇಶ ವೈ. ಗೋವನಕೊಪ್ಪ, ವಿಜಯಲಕ್ಷ್ಮಿ ಎಂ. ತಿರಕಣ್ಣವರ, ಸುರೇಶ ಯ. ಗೋವನಕೊಪ್ಪ, ಬಿ. ಬಿ. ಇಟ್ಟಣ್ಣವರ, ನೀರಜಾ ಗಣಾಚಾರಿ, ಲಾಲಬಿ ಹುಲಕೋಟಿ, ನಾಗಯ್ಯ ಈಶ್ವರಯ್ಯ ಹುಲೆಪ್ಪನವರಮಠ, ಬಿ. ಕೆ. ಹೊಂಗಲ, ಚಿನ್ನಪ್ಪಗೌಡ ಮ. ಪಾಟೀಲ, ದಾನಮ್ಮ ವಿ. ಅಂಗಡಿ, ಶಿವಾನಂದ ಎಂ. ದಾಶಾಳ, ಕೇಶವ ಜಿ., ಮಧುಮತಿ ಈಶ್ವರ ಸಣಕಲ್ಲ, ಶಶಿಕಲಾ ಎಸ್ ಕುಲಕರ್ಣಿ, ವಿಜಯಲಕ್ಷ್ಮಿ ಪಾಳೇದ, ಡಾ. ಮಹಾಂತೇಶ ಬಸಪ್ಪ ಹಳಪೇಟಿ, ಭೀಮಸೇನ ಚಿಂಚಲಿ, ಶೃತಿ ನಾ ಕುದುರೆಮೋತಿ, ನೇಹಾ ಶ್ರೀನಿವಾಸ ಬಡಿಗೇರ, ವೀಣಾ ಮಂಜುನಾಥ, ಲಲಿತಾ ಮಹಾಂತೇಶ ಅರಳಿ, ಮಲ್ಲಪ್ಪ ಈರಪ್ಪ ಚಾಯಪ್ಪಗೋಳ, ಯಲ್ಲಪ್ಪ ಕಲ್ಲಪ್ಪ ಕೊಣ್ಣೂರ, ಗೌರಿ ಯಲ್ಲನಗೌಡ ಮೇಳೇದ, ಸಿದ್ದಲಿಂಗಯ್ಯ ಅಪ್ಪಯ್ಯ ಹಿರೇಮಠ, ವಿರೂಪಾಕ್ಷಿ ಕಮತೆ, ಬಸವಣ್ಣೆಪ್ಪ ಭೀ. ಕಾದ್ರೊಳ್ಳಿ, ಎಸ್. ವಿ. ಪಟ್ಟಣಶೆಟ್ಟಿ, ಶಾಂತಾ ಕೆ. ಹೊಂಬಳ, ಭೀಮಾ ಶಿವಾನಂದ ಕುರ್ಲಗೇರಿ,ಮಮತಾಮಲ್ಲಾಗೌಡ್ರ,ಜ್ಯೋತಿ ಮಾಳಿ, ಮೇಘನಾ ಟಿ.ಎಸ್., ನಾಗನಗೌಡ ಕಲ್ಲನಗೌಡ ಹಾದಿಮನಿ, ಚಂದ್ರಶೇಖರ ಕೆ ಶೆಟ್ಟಿಹಳ್ಳಿ, ಬಾಳಗೌಡ ಶಂಕರ ದೊಡಬಂಗಿ, ಪುಷ್ಪಲತಾ ಭಾವಿಮನಿ, ವಿಜಯರೂಪಾ ತಂಬಾಕದ, ಮಲ್ಲಿಕಾರ್ಜುನ ಚಂ. ನೇಕಾರ, ಭಾಗ್ಯಶ್ರೀ ಹಳ್ಳಕೇರಿಮಠ, ಸಾಗರ ಚನ್ನಪ್ಪ ಹುನಗುಂದ, ದೀಪಾ ಶಿವಾನಂದ ನರೇಂದ್ರ, ಸುಶ್ಮಿತಾ ರಾಘವೇಂದ್ರ ಮರೇದ, ಪವಿತ್ರಾ ಈರಪ್ಪ ನರೇಂದ್ರ, ವೀರಮ್ಮ ಎಸ್. ಹಿರೇಬಿದರಿ, ಮಧು ಚಂದ್ರಶೇಖರ ಚನ್ನಂಗಿ, ಚಂದ್ರಶೇಖರ ನಿಂ. ಚನ್ನಂಗಿ, ಡಾ.ಮಲ್ಲಿಕಾರ್ಜುನ ಛಬ್ಬಿ, ಸುಧಾ ಕಬ್ಬೂರ, ಸುವರ್ಣಾ ಮಾಳಗಿಮನಿ, ಗವಿಶಿದ್ಧಯ್ಯ ಹಳ್ಳಕೇರಿಮಠ, ರಾಮಕೃಷ್ಣ ಗೋಖಲೆ, ಡಾ. ವೀರೇಶ್ ಕುಮಾರ್ ಎಸ್., ಅಫ್ರಿನ್ ಮುಸ್ತಫಾ ಮೊಖಾಶಿ, ಮಹಾಂತೇಶ ಬಸಪ್ಪ ಬಾಳಿಗಟ್ಟಿ, ಮೈಲಾರಪ್ಪ ನಿಂಗಪ್ಪ ಗೋವಣ್ಣವರ, ಗುರುಸ್ವಾಮಿ ಎಸ್. ಹಿರೇಮಠ, ಅಡಿವೆಪ್ಪ ಬ. ಇಟಗಿ ರಾಜ್ಯ ಮತ್ತು ಅಂತರರಾಜ್ಯದ ವಿವಿಧೆಡೆಯಿಂದ ಕವಿ ಕವಯಿತ್ರಿಯರು ಕವಿಗೋಷ್ಠಿಯಲ್ಲಿ ಭಾಗವಹಿಸಲಿದ್ದಾರೆ ಎಂದು ರಾಜ್ಯಮಟ್ಟದ ಕವಿಗೋಷ್ಠಿಯ ಮುಖ್ಯ ಸಂಯೋಜಕರು, ಬಸವ ಸಮಿತಿಯ ಕಾರ್ಯಕಾರಿ ಸಮಿತಿಯ ಹಿರಿಯ ಸದಸ್ಯರಾದ ಮೋಹನ ಬಸನಗೌಡ ಪಾಟೀಲ ತಿಳಿಸಿದ್ದಾರೆ. ಕವಿಗಳು, ಸಾಹಿತ್ಯಾಸಕ್ತರು, ಕನ್ನಡಾಭಿಮಾನಿಗಳು ಹಾಗೂ ಎಲ್ಲ ಕನ್ನಡ ಮನಸ್ಸುಗಳು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಬೆಂಗಳೂರಿನ ಬಸವ ಸಮಿತಿಯ ಪದಾಧಿಕಾರಿಗಳು ಕೋರಿದ್ದಾರೆ.

# ಸಂಭ್ರಮದ ದಿಂಡಿ ಉತ್ಸವ



**ನವಲಗುಂದ :** ತಾಲ್ಲೂಕಿನ ಶಿರಕೋಳ ಗ್ರಾಮದಲ್ಲಿ 92ನೇ ವರ್ಷದ ಪಾಂಡುರಂಗ ದಿಂಡಿ ಉತ್ಸವ ಸಂಭ್ರಮದಿಂದ ಜರುಗಿತು.

ದೇವಸ್ಥಾನದಲ್ಲಿ ಬೆಳಿಗ್ಗೆ ಕಾಕಡಾರತಿ, ಪಾರಾಯಣ, ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಬಳಿಕ ಅಲಂಕೃತ ಪಲ್ಲಕ್ಕಿಯಲ್ಲಿ ದೇವರ ಉತ್ಸವ ಮೂರ್ತಿ ಹಾಗೂ ಜ್ಞಾನೇಶ್ವರಿ ಗ್ರಂಥವನ್ನು ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮೂಲಕ ಎಲ್ಲ ದೇವಸ್ಥಾನಗಳಲ್ಲಿಪೂಜೆಸಲ್ಲಿಸಿಮೂಲಪಾಂಡುರಂಗ ದೇವಸ್ಥಾನಕ್ಕೆ ಆಗಮಿಸಿತು.

ಸಾಮೂಹಿಕ ಭಜನೆ, ವಾದ್ಯ ವೃಂದದ ಕೈಚಳಕ ಮೆರುಗು ನೀಡಿದವು. ಮೂರು ದಿನಗಳಿಂದ ಗ್ರಾಮದ ಮಾರುತಿ ದೇವಸ್ಥಾನದಲ್ಲಿ ಕೀರ್ತನೆ ಮತ್ತು ಧಾರ್ಮಿಕ ಪಠಣ ನಡೆಸಿಕಾಲಾ ಕೀರ್ತನೆಯೊಂದಿಗೆ ಸಂಪನ್ನಗೊಂಡಿತು.

ನವಲಗುಂದ, ಗದಗ, ಧಾರವಾಡ, ಹುಬ್ಬಳ್ಳಿ, ಹಿರೇಹಂದಿಗೊಳ, ಬೆಂಗಳೂರು, ಅಡವಿಸೋಮಾಪುರ, ಶಿಗ್ಗಟ್ಟಿ, ಮಲ್ಲಿಗವಾಡ, ಬೋಗುರ, ಚಂದನಮಟ್ಟಿ, ಗೊಬ್ಬರಗುಂಪಿ, ಅಳಗವಾಡಿ, ಮತ್ತು ಮನಸೂರಯಿಂದ ಬಂದಿದ್ದ ನೂರಾರು ಭಕ್ತರು ಮತ್ತು ಮಹಿಳೆಯರು ಎಲ್ಲ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದೇವರ ಹರಕೆ ತೀರಿಸಿದರು.

ರಾಮಕೃಷ್ಣ ಹಂಬರ್, ತಿಪ್ಪಣ್ಣ ಕುಂಬಾರ, ತಿರಕಪ್ಪ ಗೊಡಚಿ, ನಾರಾಯಣ ಹಂಬರ, ತಿಪ್ಪಣ್ಣ ತೋರಗಲ್, ಭೀಮಪ್ಪ ಬಸೀದೋನಿ, ಕೇಶವ್ ಹಡಪದ, ಬಸಪ್ಪ ಹೊಂಬಳ, ಸೋಮಣ್ಣ ನಾಯ್ಕರ ಸೇರಿ ನೂರಾರು ಭಕ್ತರು ಪಾಲ್ಗೊಂಡಿದ್ದರು.

# ಎನ್‌ಕೌಂಟರ್ ತಪ್ಪು ಅಲ್ಲ; ವಿಚಾರಣೆ ಅವಶ್ಯ: ಶಾಮ್ ಭಟ್



**ಹುಬ್ಬಳ್ಳಿ :** 'ಐದು ವರ್ಷದ ಬಾಲಕಿ ಕೊಲೆ ಆರೋಪಿ ರಿತೇಶಕುಮಾರ್‌ಗೆ ಗುಂಡು ಹೊಡೆದಿದ್ದು ತಪ್ಪು, ಸರಿ ಎಂದು ಹೇಳುತ್ತಿಲ್ಲ. ಆದರೆ, ಆಯೋಗದ ನಿಯಮಾವಳಿ ಪ್ರಕಾರ ವಿಚಾರಣೆಗೆ ಬಂದಿದ್ದೇವೆ' ಎಂದು ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಟಿ.ಶಾಮ್ ಭಟ್ ಹೇಳಿದರು.

'ಎಲ್ಲ ವ್ಯಕ್ತಿಗೂ ಜೀವಿಸುವ ಹಕ್ಕು ಇದೆ. ಅದನ್ನು ಯಾರೂ ಕಸಿದುಕೊಳ್ಳಬಾರದು. ಹುಬ್ಬಳ್ಳಿಯ ಪೊಲೀಸರು ಆರೋಪಿಯ ಬದುಕುವ ಹಕ್ಕನ್ನು ಕಿತ್ತುಕೊಂಡಿರುವುದು ಮಾನವ ಹಕ್ಕು ಉಲ್ಲಂಘನೆಯಾಗಿದೆ. ಈ ಹಿನ್ನೆಲೆಯಲ್ಲಿ ಆಯೋಗದಿಂದ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಗುಂಡು ಹಾರಿಸುವ ಅಗತ್ಯವಿತ್ತೆ ಎಂಬುದು ಸೇರಿ ಹಲವು ವಿಷಯಗಳ ಬಗ್ಗೆ ತನಿಖೆ ನಡೆಯಲಿದೆ. ಗುಂಡು ಹಾರಿಸಿದ ಪಿಎಸ್‌ಐ ಅನ್ನಪೂರ್ಣ ವಿಶ್ರಾಂತಿಯಲ್ಲಿದ್ದು, ಅವರನ್ನು ವಿಚಾರಣೆಗೆ ಒಳಪಡಿಸಬೇಕಿದೆ. ಡಿವೈಎಸ್‌ಪಿ ನೇತೃತ್ವದ ತಂಡ ತನಿಖೆ ನಡೆಸುತ್ತಿದ್ದು, ಎರಡು ತಿಂಗಳಲ್ಲಿ ಆಯೋಗಕ್ಕೆ ವರದಿ ನೀಡಲಿದೆ' ಎಂದರು.

# ಮಂದಿರದಷ್ಟೇ ಶಾಲೆಗಳಿಗೂ ಮಾನ್ಯತೆ ನೀಡಿ: ಸ್ವಾಮೀಜಿ



**ಗುಡಗೇರಿ:** 'ಮಂದಿರಗಳ ನಿರ್ಮಾಣಕ್ಕೆ ಎಷ್ಟು ಪ್ರಾಶಸ್ತ್ಯ ಕೊಡುತ್ತೇವೋ ಅಷ್ಟೇ ಶಾಲೆಗಳಿಗೆ ನೀಡಿದಾಗ ಮಾತ್ರ ಸುಸಂಸ್ಕೃತ ಸಮಾಜ ನಿರ್ಮಾಣವಾಗಲು ಸಾಧ್ಯವಾಗುತ್ತದೆ' ಎಂದು ಕಾಗಿನೆಲೆಯ ನಿರಂಜನಾನಂದ ಪುರಿ ಸ್ವಾಮೀಜಿ ಹೇಳಿದರು.

ಹರಲಾಪೂರ ಗ್ರಾಮದಲ್ಲಿ ಸೋಮವಾರ ಬೀರಲಿಂಗೇಶ್ವರ ಸ್ವಾಮಿ ದೇವರ ದೇವಸ್ಥಾನ ಲೋಕಾರ್ಪಣೆ ಹಾಗೂ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. 'ದೇವಸ್ಥಾನ ನಿರ್ಮಾಣದಿಂದ ಅಲ್ಲಿ ನೆಮ್ಮದಿ ಶಾಂತಿ ಲಭಿಸುತ್ತದೆ. ಶಾಲೆಗಳಲ್ಲಿ ಜ್ಞಾನದ ಭಂಡಾರ ದೊರೆಯುತ್ತದೆ. ಮೊದಲು ಶಿಕ್ಷಣಕ್ಕೆ ನಾವು ಒತ್ತು ನೀಡಿದಾಗ ಆರ್ಥಿಕವಾಗಿ ಸಾಮಾಜಿಕವಾಗಿ ಮುಂದುವರಿಯಲು ಸಾಧ್ಯ' ಎಂದು ಹೇಳಿದರು.

ಗ್ಯಾರಂಟಿ ಸಮಿತಿ ತಾಲ್ಲೂಕು ಘಟಕದ ಅಧ್ಯಕ್ಷ ಶಿವಾನಂತ ಬೆಂತೂರು ಮಾತನಾಡಿ, ' ಕುರುಬ ಸಮುದಾಯವು ಆರ್ಥಿಕವಾಗಿ ಶೈಕ್ಷಣಿಕವಾಗಿ ಮುಂದೆ ಬರಬೇಕು. ಕನಕದಾಸರು ಬರೆದ ವಚನಗಳು ಅವರ ಚರಿತ್ರೆಗಳನ್ನು ನಮ್ಮ ಮಕ್ಕಳಿಗೆ ಕಲಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಈಶ್ವರಯ್ಯ ಅಮೋಗಿಮಠ, ಗ್ರಾಮ ಪಂಚಾಯಿತಿ ಅಧ್ಯಕ್ಷ ಬಸವರಾಜ ಬಟ್ಟೂರ, ಕುರುಬ ಸಮಾಜದ ತಾಲ್ಲೂಕು ಘಟಕದ ಅಧ್ಯಕ್ಷ ಲಕ್ಷ್ಮಣ ಚುಳಕಿ, ಚನ್ನಪ್ಪ ಕಲ್ಲಣ್ಣವರ, ವೀರುಪಾಕ್ಷಪ್ಪ ಗುಡಿಸಾಗರ, ಈಶ್ವರ ಬಂಡಿವಾಡ, ಗಂಗಣ್ಣ ದುರಗಣ್ಣವರ, ಹನುಮಂತಪ್ಪ ಕಂಬಳಿ, ನಿಂಗಪ್ಪ ಹಳ್ಳಿಕೇರಿ ಇದ್ದರು.

ಇದಕ್ಕೂ ಮುನ್ನ ಗ್ರಾಮದಲ್ಲಿ ಬೀರಲಿಂಗೇಶ್ವರ ಪಾಲಕಿ ಉತ್ಸವ, ಸಂಗೊಳ್ಳಿ ರಾಯಣ್ಣನ ಮೂರ್ತಿಗಳ ಮೆರವಣಿಗೆ ವೈಭವದಿಂದ ಜರುಗಿತು.

ಗುಡಿಸಾಗರ, ಡೋಣಿ, ಸೂರಣಗಿ, ಅಣ್ಣಿಗೇರಿ, ಮುಳಗುಂದ ಗ್ರಾಮದ ಡೊಳ್ಳು ಮೇಳಗಳು ಮೆರವಣಿಗೆಗೆ ರಂಗು ನೀಡಿತು. ಮೆರವಣಿಗೆಯಲ್ಲಿ ಭಕ್ತರು ಭಂಡಾರ ಎರಚಿ ಸಂಭ್ರಮಿಸಿ ಬೀರಲಿಂಗೇಶ್ವರ ಮಹಾರಾಜಕೀ ಜೈ ಎಂಬ ಜೈಯ ಘೋಷಗಳು ಮೊಳಗಿಸಿದರು. ಭಕ್ತರು ಪಲ್ಲಕ್ಕಿಗೆ ಹಣ್ಣು ಕಾಯಿ ಅರ್ಪಿಸಿದರು.

# ಭಾಗ್ಯಲಕ್ಷ್ಮೀ: 3,040 ಖಾತೆಗೆ ಹಣ ಜಮೆ

**ಹುಬ್ಬಳ್ಳಿ :** ಧಾರವಾಡ ಜಿಲ್ಲೆಯಲ್ಲಿ ಭಾಗ್ಯಲಕ್ಷ್ಮಿ–ಸುಕನ್ಯಾ ಸಮೃದ್ಧಿ ಯೋಜನೆಯಡಿ 3,040 ಫಲಾನುಭವಿಗಳ ಖಾತೆಗೆ 'ಮೆಚ್ಯುರಿಟಿ ಮೊತ್ತ' ಜಮೆಯಾಗಿದೆ.

ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣುಮಕ್ಕಳ ಜನನವನ್ನು ಪ್ರೋತ್ಸಾಹಿಸಲು 2006?07ರಲ್ಲಿ ಆಗಿನ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರು 'ಭಾಗ್ಯಲಕ್ಷ್ಮಿ' ಯೋಜನೆ ಆರಂಭಿಸಿದ್ದರು. ಆಗ ನೋಂದಾಯಿಸಿದ ಹೆಣ್ಣುಮಕ್ಕಳಿಗೆ ಸದ್ಯ 18 ವರ್ಷ ತುಂಬಿದ್ದು, ಅರ್ಹ ಫಲಾನುಭವಿಗಳ ಖಾತೆಗೆ ನೇರವಾಗಿ 'ಮೆಚ್ಯುರಿಟಿ ಮೊತ್ತ' (ಹಣ) ಜಮೆ ಮಾಡಲಾಗುತ್ತಿದೆ.

2006–07ರಲ್ಲಿ ಜಿಲ್ಲೆಯಲ್ಲಿ ಒಟ್ಟು 8,788 ಹೆಣ್ಣುಮಕ್ಕಳ ನೋಂದಣಿ ಆಗಿತ್ತು. ಕಾಲಕಾಲಕ್ಕೆ ಈ ಯೋಜನೆಯಲ್ಲಿ ಬದಲಾವಣೆ ಮಾಡಿ, ನೀಡುವ ಮೊತ್ತವನ್ನು ಏರಿಕೆ ಮಾಡಲಾಗಿದೆ. 2006?07ರಲ್ಲಿ ನೋಂದಣಿಯಾದವರಿಗೆ 18ವರ್ಷ ಪೂರೈಸಿದನಂತರದೊರೆಯುವಮೊತ್ತ?32,351. ನಂತರ 2008ರ ಆ.1ರಿಂದ 2019?20ರ ಅವಧಿಯಲ್ಲಿ ನೋಂದಾಯಿಸಿದವರಿಗೆ ಅಂದಾಜು ಮೊತ್ತವನ್ನು ?1 ಲಕ್ಷಕ್ಕೆ ಏರಿಕೆ ಮಾಡಲಾಯಿತು.

2020–21ನೇ ಸಾಲಿನಿಂದ ಭಾಗ್ಯಲಕ್ಷ್ಮಿ ಯೋಜನೆಯನ್ನು ಅಂಚೆ ಇಲಾಖೆಯ ಸುಕನ್ಯಾ ಸಮೃದ್ಧಿ ಯೋಜನೆಯೊಂದಿಗೆ ವಿಲೀನಗೊಳಿಸಿ, 'ಭಾಗ್ಯಲಕ್ಷ್ಮಿ ?ಸುಕನ್ಯಾ ಸಮೃದ್ಧಿ' ಎಂದು ರೂಪಾಂತರಗೊಳಿಸಲಾಯಿತು. ಇದರನ್ವಯ ಫಲಾನುಭವಿಗೆ 21 ವರ್ಷ ಪೂರ್ಣಗೊಂಡ ನಂತರ ಅಂದಾಜು ?1.27 ಲಕ್ಷ ನೀಡಲಾಗುತ್ತದೆ.

ಜಿಲ್ಲೆಯಲ್ಲಿ 2006ರಿಂದ ಈರೆಗೆ ಒಟ್ಟು 1,26,515 ಹೆಣ್ಣುಮಕ್ಕಳ ನೋಂದಣಿಯಾಗಿದ್ದು, ಅದರಲ್ಲಿ 2008ರಲ್ಲಿ ಅತೀ ಹೆಚ್ಚು ಅಂದರೆ 9,884 ಹಾಗೂ ಅತೀ ಕಡಿಮೆ 2025ರಲ್ಲಿ ಮಾರ್ಚ್ 31ರವರೆಗೆ 343 ಜನರ ನೋಂದಣಿಯಾಗಿದೆ. ಈವರೆಗೆ 1,18,616 ಜನರಿಗೆ ಬಾಂಡ್ ವಿತರಿಸಲಾಗಿದ್ದು, 7,899 ಫಲಾನುಭವಿಗಳಿಗೆ ಬಾಂಡ್ ವಿತರಿಸಬೇಕಿದೆ.

ಸಲ್ಲಿಸಬೇಕಾದದಾಖಲೆಗಳು: 'ಭಾಗ್ಯಲಕ್ಷ್ಮಿ ಬಾಂಡ್, ಬ್ಯಾಂಕ್ ಪಾಸ್ ಬುಕ್, ಮಗುವಿನ ಜನನ ಪ್ರಮಾಣ ಪತ್ರ, ಶಾಲಾ ವ್ಯಾಸಂಗ ಪ್ರಮಾಣ ಪತ್ರ, ಪ್ರಕೃತಿ ವಿಕೋಪದಿಂದ ಬಾಂಡ್ ಕಳೆದುಹೋಗಿದ್ದಲ್ಲಿ ಸಿಡಿಪಿಒ ದೃಢೀಕರಣ ಪತ್ರ, ತಂದೆ–ತಾಯಿ, ಫಲಾನಭವಿಯ ಆಧಾರ್ ಕಾರ್ಡ್, ಫಲಾನುಭವಿಯ ತಾಯಿಯ ಆಪರೇಷನ್ ಕಾರ್ಡ್ ಅಥವಾ ಸಂತಾನಹರಣ ಶಸ್ತ್ರಚಿಕಿತ್ಸೆಯ ಪ್ರತಿ, ಬಾಲಕಾರ್ಮಿಕಳಾಗದಿರುವ ಹಾಗೂ ಬಾಲ್ಯವಿವಾಹ ಆಗದಿರುವ ಬಗ್ಗೆ ದೃಢೀಕರಣ ಪತ್ರ ನೀಡಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿ ಎಚ್.ಎಚ್.ಕುಕನೂರ್ ತಿಳಿಸಿದರು.

'ನೋಂದಣಿಯಾದ ಹೆಣ್ಣುಮಕ್ಕಳು ಕಡ್ಡಾಯವಾಗಿ 9ನೇ ತರಗತಿವರೆಗೆ ಶಿಕ್ಷಣ ಪಡೆದಿರಬೇಕು. ಬಾಲಕಾರ್ಮಿಕರಾಗಿರಬಾರದು, ಬಾಲ್ಯವಿವಾಹ ಆಗಿರಬಾರದು, ಪಾಲಕರು ಕಡ್ಡಾಯವಾಗಿ ಎರಡು ಮಕ್ಕಳನ್ನು ಮಾತ್ರ ಹೊಂದಿರಬೇಕು. ಹೆಚ್ಚು ಮಕ್ಕಳ ಇದ್ದಲ್ಲಿ ಅವರು ಯೋಜನೆಯಿಂದ ವಂಚಿತರಾಗುತ್ತಾರೆ' ಎಂದು ಅವರು ತಿಳಿಸಿದರು.

'ಅಂಗನವಾಡಿ ಶಿಕ್ಷಕರು ಎಲ್ಲ ದಾಖಲೆಗಳನ್ನು ಪರಿಶೀಲಿಸಿ, ದೃಢೀಕರಿಸಿದ, ನಂತರ ಸಿಡಿಪಿಒಗಳು ಪುನಃ ಪರಿಶೀಲಿಸಿ, ಕಚೇರಿಗೆ ಸಲ್ಲಿಸುತ್ತಾರೆ. ದಾಖಲೆ ಸಲ್ಲಿಕೆ ಸಂದರ್ಭದಲ್ಲಿ ಕಡ್ಡಾಯವಾಗಿ ಫಲಾನುಭವಿಗಳು ಹಾಜರಿರಬೇಕು. ನಮ್ಮ ಅಂಗನವಾಡಿ ವ್ಯಾಪ್ತಿಯಲ್ಲಿ ಈವರೆಗೆ ಅರ್ಹ 20 ಫಲಾನುಭವಿಗಳ ಪೈಕಿ 19 ಜನರ ಖಾತೆಗೆ ಹಣ ಜಮೆಯಾಗಿದೆ. ದಾಖಲೆಯಲ್ಲಿನ ಸಮಸ್ಯೆಯಿಂದ ಒಬ್ಬರ ಖಾತೆಗೆ ಹಣ ಜಮೆಯಾಗಿಲ್ಲ, ಅವರ ಖಾತೆಗೂ ಹಣ ಜಮೆಯಾಗಲಿದೆ' ಎಂದು ಮಾರುತಿ ನಗರದ ಅಂಗನವಾಡಿ ಶಿಕ್ಷಕಿ ಸಾವಿತ್ರಿ ಬಿರಾದಾರ ಮಾಹಿತಿ ನೀಡಿದರು.

# ಹುತಾತ್ಮರ ಆತ್ಮಕ್ಕೆ ಶಾಂತಿ ಕೋರಿ



**ಹುಬ್ಬಳ್ಳಿ :** ಕಾಶ್ಮೀರದ ಪಹಲ್‌ಗಾಂವಿನಲ್ಲಿ ನಡೆದ ಉಗ್ರರ ದಾಳಿಯಲ್ಲಿ ಹುತಾತ್ಮರಾದ ಪ್ರವಾಸಿಗರ ಆತ್ಮಕರಿಗೆ ಶಾಂತಿ ಕೋರಿ ಗೌರವ ಸ್ಮರಣಾರ್ಥ, ಹುಬ್ಬಳ್ಳಿಯ ದುರ್ಗದಬೈಲ್‌ನಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗದ ವತಿಯಿಂದ ಕ್ಯಾಂಡಲ್ ಮಾರ್ಚ್ ಹಾಗೂ ಮೌನಾಚರಣೆ ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ, ಶ್ರದ್ಧಾಂಜಲಿಯೊಂದಿಗೆ ರಾಷ್ಟ್ರ ಭದ್ರತೆಗೆ ಪ್ರತಿಜ್ಞೆ ಮಾಡಲಾಯಿತು ಅಧ್ಯಕ್ಷ ಸುರೇಶ್ ಗೋಕಾಕ್ ಮಾತನಾಡಿ, "ನಾವು ನಮ್ಮ ದೇಶದ ಪ್ರಧಾನ ಮಂತ್ರಿಯವರ ಜೊತೆ ಇದ್ದೇವೆ. ಪಾಕಿಸ್ತಾನ ಒಳಗೆ ಪ್ರವೇಶಿಸಿ ಉಗ್ರರನ್ನು ಸದೆ ಬಡೆಯುವ ಶಕ್ತಿ ನಮಗಿದೆ. ನಮ್ಮ ಸೇನೆಯ ಧೈರ್ಯ ಮತ್ತು ಬಲದ ಬಗ್ಗೆ ನಮಗೆ ಹೆಮ್ಮೆ ಇದೆ," ಎಂದು ಹೇಳಿದರು.

ಕಿರಣ್ ಉಪ್ಪಾರ್, ಹುಸೇನ್ ಬರದ್ ವಾಲೆ, ಅಷ್ಫಕ್ ಶಿರೂರು, ಕಿರಣ್ ಬಿಜ್ವಾಡ, ಎಲ್ಲಪ್ಪ ಅಂಬಿಗೇರ ಪಾಲ್ಗೊಂಡಿದ್ದರು.

# ಸಂಭ್ರಮದ ಅಗ್ಗಿ, ಪಾಲಕಿ ಉತ್ಸವ ಮೆರವಣಿಗೆ



**ಗುಳೇದಗುಡ್ಡ :** ಪಟ್ಟಣದ ಶ್ರೀ ಷಡಕ್ಷರಯ್ಯ ಮಹಾಸ್ವಾಮಿಗಳ ಬೃಹನ್ಮಠದಲ್ಲಿ ಜಾತ್ರಾ ಮಹೋತ್ಸವ, ಶ್ರೀ ಬಸಯ್ಯ ಅಜ್ಜನವರ ಜಾತ್ರೆ ಹಾಗೂ ಶ್ರೀ ಷಡಕ್ಷರಯ್ಯ ಸ್ವಾಮಿಗಳ 27ನೇ ಪುಣ್ಯಾರಾಧನೆಯ ಪ್ರಯುಕ್ತವಾಗಿ ಕುಂಭ ಮೇಳ ಮೆರವಣಿಗೆ ಹಾಗೂ ಅಗ್ಗಿ ಉತ್ಸವ ಕಾರ್ಯಕ್ರಮ ಬಹಳಷ್ಟು ಸಡಗರ, ಸಂಭ್ರಮದಿಂದ ಜರುಗಿತು. ಬೃಹನ್ಮಠದಲ್ಲಿದೇವಿಪಾರಾಯಣ, ಶ್ರೀ ಬಸಯ್ಯ ಅಜ್ಜನವರ ತಪೋಗದ್ದುಗೆಗೆ ಮಹಾರುದ್ರಾಭಿಷೇಕ ನಡೆಯಿತು. ಅಗ್ಗಿ ಉತ್ಸವ ಮಠದಿಂದ ಆರಂಭಗೊಂಡು ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರದಲ್ಲಿ ಗಂಗಾಪೂಜೆ ನಡೆಯಿತು. ಜಾತ್ರೆ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮದ ಅಂಗವಾಗಿ ನಡೆದ ಮಹಿಳೆಯರ ಕುಂಭಮೇಳ, ನಂದಿಕೋಲು, ಪಾಲಕಿ ಉತ್ಸವ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಅದ್ದೂರಿಯಾಗಿ ನಡೆದು ಶ್ರೀಮಠಕ್ಕೆ ಬಂದು ತಲುಪಿತು.

ನಂತರ ಪುರವಂತರಿಂದ ಅಗ್ಗಿ ಪ್ರವೇಶ ನಂತರ ಶ್ರೀದೇವಿಗೆ ಉಡಿ ತುಂಬಿ ಮಹಾಪೂಜೆ ನೆರವೇರಿಸಲಾಯಿತು. ಷಡಕ್ಷಯ್ಯ ಮಠದ ಶ್ರೀ ಅಯ್ಯಪ್ಪಯ್ಯ ಹಿರೇಮಠ ಅವರ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಗಳು ನಡೆದವು. ಅಮರೇಶ್ವರ ಮಠದ ಡಾ.ನೀಲಕಂಠ ಶಿವಾಚಾರ್ಯ ಮಹಾಸ್ವಾಮಿಗಳು, ರೋಣದ ವಿಶ್ವನಾಥ ದೇವರು, ಕಂದಕೂರು ಕಲ್ಮಠದ ಸಿದ್ದಲಿಂಗಯ್ಯ ಸ್ವಾಮಿಗಳು, ಮೈಲಾರಲಿಂಗೇಶ್ವರ ಸ್ವಾಮಿಗಳು ಸಾನಿಧ್ಯವಹಿಸಿದ್ದರು.

ಕಮತಗಿ, ಗುಳೇದಗುಡ್ಡ, ಹುನಗುಂದ, ಹರದೊಳ್ಳಿ ವಿವಿಧ ಕಡೆಗಳಿಂದ ಅನೇಕ ಜನಪದ ವಾದ್ಯಮೇಳಗಳು ಕುಂಭಮೇಳ ಮೆರವಣಿಗೆಗೆ ವಿಶೇಷ ಕಳೆ ತಂದವು.

ಕಾರ್ಯಕ್ರಮದಲ್ಲಿ ಶರಣಬಸಪ್ಪ ತಾಂಡೂರ, ಹನಮಂತ ಪಲಮಾರಿ, ಶಂಕರ ಲಕ್ಕುಂಡಿ, ಬಸವರಾಜ ತಾಂಡೂರ, ಶಿವಪ್ಪ ಕೊಕತಿ, ಸಂಗನಬಸಪ್ಪ ಮಾಮನಿ, ಯಮನಪ್ಪ ವಾಲಿಕಾರ, ತಲಗುರದಪ್ಪ ತೊಗಲಂಗಿ, ಈಶ್ವರ ಎಣ್ಣಿ ಸೇರಿದಂತೆ ಇನ್ನೂ ಅನೇಕರು ಇದ್ದರು.

# ಸಮುದಾಯದ ಆರ್ಥಿಕ ಉನ್ನತಿಗೆ ಸೌಹಾರ್ದ ಸಂಸ್ಥೆಗಳ ಸೇವೆ ಅಗತ್ಯ: ಗದ್ದಿಗೌಡರ



**ಬಾಗಲಕೋಟೆ :** ಜನರ ಹಾಗೂ ಸಮುದಾಯದ ಆರ್ಥಿಕ ಉನ್ನತಿಗೆ ಸೌಹಾರ್ದ ಸಂಸ್ಥೆಗಳ ಸೇವೆ ಅಗತ್ಯವಾಗಿದ್ದು, ಪ್ರಭುಲಿಂಗೇಶ್ವರ ಸೌಹಾರ್ದ ಸಂಸ್ಥೆ ತನ್ನದೆಯಾದ ಸೇವೆಯೊಂದಿಗೆ ಸದಸ್ಯರ ಆರ್ಥಿಕ ಉನ್ನತಿಗಾಗಿ ಶ್ರಮಿಸುತ್ತಿದೆ ಎಂದು ಸಂಸದರಾದ ಪಿ.ಸಿ.ಗದ್ದಿಗೌಡರ ಹೇಳಿದರು.

ಅವರು ನವನಗರದಲ್ಲಿ ಕಾಳಿದಾಸ ಶಿಕ್ಷಣ ಸಂಸ್ಥೆಯ ವಾಣಿಜ್ಯ ಸಂಕೀರ್ಣದಲ್ಲಿ ಸೋಮವಾರ ಪ್ರಭುಲಿಂಗೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘದ 14ನೇ ನೂತನ ಶಾಖೆಯನ್ನು ಉದ್ಘಾಟನೆ ಮಾಡಿ ಮಾತನಾಡಿದರು.


ಪ್ರಭುಲಿಂಗೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ಉತ್ತರ ಕರ್ನಾಟಕದ ಬಾಗಲಕೋಟೆ ಜಿಲ್ಲೆಯಲ್ಲಿ ಬೆಳೆಯುತ್ತಿರುವ ಸೌಹಾರ್ದ ಸಂಸ್ಥೆಯಾಗಿದ್ದು, ಸದಸ್ಯರ ಆರ್ಥಿಕ ಉನ್ನತಿಗಾಗಿ ಶ್ರಮಿಸುತ್ತಿದೆ. ಯುವ ಸಹಕಾರಿಗಳ ಉತ್ಪನ್ನವಾದ ಈ ಸಹಕಾರಿ ಸಂಸ್ಥೆಯು 24–12–2003 ರಿಂದ ತನ್ನ ಕಾರ್ಯವನ್ನು ಪ್ರಾರಂಭಿಸಿತು. ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯ್ದೆ 1997 ರ ಅಡಿಯಲ್ಲಿ ಈ ಸಹಕಾರಿ ಸಂಸ್ಥೆಯನ್ನು ನೋಂದಾಯಿಸಲಾಗಿದೆ; ಇದರ ನೋಂದಾಯಿತ ಕಚೇರಿ ಜಮಖಂಡಿಯಲ್ಲಿದೆ. ಸೌಹಾರ್ದ ಸಹಕಾರಿ ತತ್ವಗಳಿಗೆ ಸಲ್ಲುವ ಗೌರವವು ಸಹಕಾರ ಸಂಸ್ಥೆಯನ್ನು ನಿರಂತರ ಬೆಳವಣಿಗೆಯತ್ತ ಗಮನಹರಿಸುವಂತೆ ಮಾಡಿದೆ ಎಂದರು.

ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಮಾತನಾಡಿ ಎಲ್ಲರಿಗಾಗಿ ನಾನು;ನನಗಾಗಿ ಎಲ್ಲರೂ ಇದು ಸಹಕಾರ ತತ್ವದ ಮುಖ್ಯ ಸಂದೇಶ. ಇಂತಹ ಶ್ರೇಷ್ಠ ತತ್ವದ ಬುನಾದಿಯ ಮೇಲೆ ಕಟ್ಟಿರುವುದು ಈ ಸಹಕಾರ ಕ್ಷೇತ್ರ. ಪರಸ್ಪರ ಸಹಕಾರ, ನಂಬಿಕೆಯ ಅಮೂಲ್ಯ ತತ್ವಗಳ ಬುನಾದಿಯ ಮೇಲೆ ಅಸ್ತಿತ್ವಕ್ಕೆ ಬಂದಿರುವವು. ಅಧಿರಕಾರದ ಕುರ್ಚಿ ಮೇಲೆ ಕೂತವರು ಪ್ರತಿ ಕ್ಷಣವೂ ಆ ಸಂಸ್ಥೆಯ ಅಭಿವೃದ್ಧಿಯ ಬಗ್ಗೆ ಚಿಂತಿಸಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಸೌಹಾರ್ದ ಸಂಸ್ಥೆಯ ಸಂಸ್ಥಾಪಕರು ಹಾಗೂ ಅಧ್ಯಕ್ಷರು ಜಮಖಂಡಿಯ ಶಾಸಕರಾದ ನಾಡೋಜ ಜಗದೀಶ ಗುಡಗುಂಟಿ ನಂಬಿಕೆ ವಿಶ್ವಾಸದ ಮೇಲೆ ಎಲ್ಲ ಸಹಕಾರ ಸಂಸ್ಥೆಗಳ ಭವಿಷ್ಯ ನಿಂತಿರುತ್ತದೆ. ನಂಬಿಕೆಯೇ ಸಹಕಾರ ಕ್ಷೇತ್ರದ ಬುನಾದಿಯಾಗಿದೆ ಎಂದರು.

ಸಂಸ್ಥೆಯ ಪೂಜಾ ಕಾರ್ಯಕ್ರಮದಲ್ಲಿ ಬಿಲ್ಕೆರೂರಿನ ಪೂಜ್ಯರಾದ ಸಿದ್ದಲಿಂಗ ಶಿವಾಚಾರ್ಯಸ್ವಾಮಿಗಳು, ಕೆರೂರ ಚರಂತಿಮಠದಡಾ.ಶಿವಕುಮಾರಸ್ವಾಮಿಗಳು. ಮುರನಾಳ ಮಳೇರಾಜೇಂದ್ರಸ್ವಾಮಿ ಮಠ ಪೂಜ್ಯರಾದ ಜಗನ್ನಾಥಮಹಾಸ್ವಾಮಿಗಳು, ಕಮತಗಿ ಹಿರೇಮಠದ ಶಿವಕುಮಾರಸ್ವಾಮಿಗಳು, ಗುಳೆದಗುಡ್ಡದ ಡಾ.ಕಾಡಸಿದ್ದೇಶ್ವರ ಸ್ವಾಮಿಗಳು ಸೇರಿದಂತೆ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಮಾಜಿ ಸಚಿವ ಎಸ್.ಆರ್.ಪಾಟೀಲ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಮಹೇಶ ಅಥಣಿ, ರಾಜು ನಾಯ್ಕರ, ಪ್ರಭುಸ್ವಾಮಿ ಸರಗಣಾಚಾರಿ, ಸಂಗಯ್ಯ ಸರಗಣಾಚಾರಿ, ಸಂಸ್ಥೆಯ ಉಪಾಧ್ಯಕ್ಷ ನೇಮಣ್ಣ ಜಮಖಂಡಿ, ನಿರ್ದೇಶಕರಾದ ರಾಜೇಂದ್ರಕುಮಾರ ಗುಡಗುಂಟಿ, ವಿದ್ಯಾವತಿ ಮಳಲಿಮಠ, ಪಾರ್ವತಿ ಗುಡಗುಂಟಿ, ನಾಗಪ್ಪ ಸನದಿ, ದೇವಲ ದೇಸಾಯಿ, ಚನ್ನಪ್ಪ ಮಾಳವಾಡ, ಡಾ.ಮಲ್ಲಿಕಾರ್ಜುನ ಕೊಡ್ಲಿವಾಡಮಠ, ಹನಮಂತ ದಾಸರ, ಮಲ್ಲಮ್ ಕೋಟಿ ಸೇರಿದಂತೆ ಎಲ್ಲ ಸದಸ್ಯರು ಭಾಗವಹಿಸಿದ್ದರು.

# ಜನಸಾಮಾನ್ಯರ ಬದುಕಿಗೆ ಬೆಳಕಾದ ತಡವಲಗದ ಮರುಳಸಿದ್ದರು: ಡಾ. ಇಂಡಿ




**ಇಂಡಿ :** ಘನ ವ್ಯಕ್ತಿತ್ವ ಹೊಂದಿದ್ದ ತಡವಲಗ ಮರುಳಸಿದ್ದರು ಜನಮನದಲ್ಲಿ ಸಾಮಾಜಿಕ, ಧಾರ್ಮಿಕ ಚಿಂತನೆಗಳನ್ನು ತಮ್ಮ ಪ್ರವಚನ ಮೂಲಕ ನೀಡಿ, ಸಮನ್ವಯತೆಯಿಂದ ಬದುಕಿಗೆ ದಾರಿ ತೋರಿಸಿದ ಮಹಾತ್ಮರು ಎಂದು ಸಾಹಿತಿ ಡಾ.ಕೆ ಎಂ ಇಂಡಿ ಹೇಳಿದರು.

ಅವರು ಶನಿವಾರದಂದು ಭೀಮಾಂತರಂಗ ಆನ್ ಲೈನ್ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಜಗಲಿ ಕೇಂದ್ರದ ವತಿಯಿಂದ ಹಮ್ಮಿಕೊಂಡ 'ತಡವಲಗ ಮರುಳಸಿದ್ದರು' ಕುರಿತ ಆನ್ ಲೈನ್ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಮಾತನಾಡಿದರು.

ಮನುಕುಲದ ಉದ್ದಾರಕ್ಕಾಗಿ ಅನೇಕ ಪವಾಡಗಳನ್ನು ಮಾಡುತ್ತಾ, ಮಕ್ಕಳಿಲ್ಲದವರಿಗೆ ಮಕ್ಕಳ ಭಾಗ್ಯ, ರೋಗ ರುಜಿನ ಭಾಧಿತರಿಗೆ ಆರೋಗ್ಯ ಪರಿಹಾರಗಳನ್ನು ಕೊಡುತ್ತಾ ಶರಣ ಸಂವಿಧಾನವನ್ನು ಪಾಲಿಸುತ್ತಾ ಬಂದು, ಜನಸಾಮಾನ್ಯರ ಬದುಕಿಗೆ ಬೆಳಕಾದವರು ತಡವಲಗ ಮರುಳಸಿದ್ದರು ಎಂದು ಹೇಳಿದರು.

ತಡವಲಗ ಮರುಳಸಿದ್ದರ ಜಾತ್ರೆ ಶ್ರಾವಣ ಮಾಸದಲ್ಲಿ ನಡೆಯುತ್ತಿದ್ದು, ಅಂದಿನಿಂದ ಇಂದಿನವರೆಗೂ ಜನರು ಪೂಜೆ ಕಟ್ಟಿ ನೋಡಿ ತಮ್ಮ ಮನೆ ನಿರ್ಮಾಣ, ಬೆಳೆ ಬೆಳೆಯುವ ಪದ್ಧತಿ ಆರಂಭ ಮಾಡುವ ಪರಂಪರೆ ಚಾಲ್ತಿಯಲ್ಲಿದೆ. ಅವರು ದುಷ್ಟರ ಸಂಹಾರ ಮಾಡುತ್ತಾ, ಶಿಷ್ಟರ ರಕ್ಷಕರಾಗಿದ್ದರು ಎಂದು ಹೇಳಿದರು.

ಮುಖ್ಯೋಪಾಧ್ಯಾಯ ಚಿದಂಬರ ಬಂಡಗರ ಮಾತನಾಡಿ, ರಚನಾತ್ಮಕ ಹಾಗೂ ಕ್ರಿಯಾತ್ಮಕ ಚಿಂತನೆಗಳ ಮೂಲಕ 2021 ರಲ್ಲಿ ಅಸ್ತಿತ್ವಕ್ಕೆ ಬಂದ ನಮ್ಮ ಜಗಲಿ ಕೇಂದ್ರವು ಒಂದು ನಿರ್ಧಿಷ್ಟ ಪ್ರಾದೇಶಿಕತೆಯ ಮೇಲೆ ಆಗುತ್ತಿರುವ ಸಾಂಸ್ಕೃತಿಕ ಅವಹೇಳನದ ವಿರುದ್ಧ ಸೆಟೆದು ನಿಂತ ಮನಸ್ಸುಗಳ ಮೊತ್ತವಾಗಿ ತನ್ನ ಕಾರ್ಯ ಮಾಡುತ್ತಿದೆ ಎಂದು ಹೇಳಿದರು.

ಡಿ ಎನ್ ಅಕ್ಕಿ, ಗೀತಯೋಗಿ, ರಾಘವೇಂದ್ರ ಕುಲಕರ್ಣಿ, ಬಸವರಾಜ ಕಿರಣಗಿ, ಶ್ರೀಧರ ಹಿಪ್ಪರಗಿ, ಬಿ ಸಿ ಭಗವಂತಗೌಡರ, ಸರೋಜಿನಿ ಮಾವಿನಮರ, ರಾಜು ಕೊಪ್ಪ, ವಿದ್ಯಾ ಕಲ್ಯಾಣಶೆಟ್ಟಿ, ನಿಂಗಣ್ಣ ಬಿರಾದಾರ, ರಮೇಶ ಕತ್ತಿ, ಸಂಗನಗೌಡ ಹಚಡದ, ಸುವರ್ಣ ಗುರವ, ರಮ್ಜಾನ್ ನದಾಫ್, ನಿಂಗಣ್ಣ ರೊಳ್ಳಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಶಿಕ್ಷಕ ವೈ ಜಿ ಬಿರಾದಾರ ಸ್ವಾಗತಿಸಿ, ಪರಿಚಯಿಸಿದರು. ಶಿಕ್ಷಕ ಸಂತೋಷ ಬಂಡೆ ನಿರೂಪಿಸಿದರು.

# ಹಾರತುರಾಯಿಗಾಗಿ ಸಾಹಿತ್ಯ ರಚನೆಯಾಗಬಾರದು



**ಗುಳೇದಗುಡ್ಡ :** ಸಂಶೋಧನೆ ಸಾಹಿತ್ಯ ಕೇವಲ ಐತಿಹ್ಯಗಳ ಮೂಲಕನಿರ್ಧರಿತವಾಗಬಾರದು. ಇತಿಹಾಸವನ್ನುಸರಿಂಯಾಗಿ ಪರಮರ್ಶಿಸಬೇಕು. ನಮ್ಮ ಅವಸರದ ಸಂಶೋಧನೆಗಳು ಮುಂದಿನ ತಲೆಮಾರುಗಳ ದಾರಿ ತಪ್ಪಿಸುವಂತಾಗಬಾರದು. ಹಾರತುರಾಯಿಗಾಗಿ ಸಾಹಿತ್ಯ, ಸಂಶೋಧನೆ ರಚನೆಯಾಗಬಾರದು ಎಂದು 5ನೇ ಗುಳೇದಗುಡ್ಡ ತಾಲೂಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಪ್ರೊ.ಸಿದ್ಧಲಿಂಗಪ್ಪ ಬರಗುಂಡಿ ಹೇಳಿದರು.

ಅವರು ಪಟ್ಟಣದ ಅಂಬಾಭವಾನಿ ದೇವಸ್ಥಾನದ ಸಭಾಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಹಲವು ಕನ್ನಡಪರ ಸಂಘಟನೆಗಳ ಸಹಕಾರದೊಂದಿಗೆ ಹಮ್ಮಿಕೊಂಡಿದ್ದ ಗುಳೇದಗುಡ್ಡ ತಾಲೂಕು 5ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಮಾತನಾಡಿ, ಇಂದಿನ ಯುವಕರು ರಾಜಕಾರಣಿಗಳ, ಮತಾಂಧರ ಕೈಗೊಂಬೆಗಳಾಗುತ್ತಿದ್ದಾರೆ. ಅವರಿಗೆ ಕಾಯಕ ಹಾಗೂ ದಾಸೋಹದ ಅರಿವು ಮೂಡಬೇಕು. ಧರ್ಮ ಎಂಬದು ಅಫೀಮು ಆಗದೇ ನಮ್ಮ ಅಂತಃಶಕ್ತಿ ಹೆಚ್ಚಿಸುವ ಸಾಧನವಾಗಬೇಕು. ಇಂದಿನ ಯುವಕರಿಗೆ ಮಾರ್ಗದರ್ಶನ ನೀಡುವ ಸಾಹಿತ್ಯ ರಚನೆಯಾಗಬೇಕು ಎಂದರು.

ಗುಳೇದಗುಡ್ಡ ತಾಲೂಕು ಸಾಹಿತ್ಯ ಹಾಗೂ ಸಾಂಸ್ಕೃತಿಕವಾಗಿ ಬಹುಶ್ರೀಮಂತಿಕೆ ಹೊಂದಿದ್ದು, 1540ರಲ್ಲಿ ಇಲ್ಲಿನ ಮುರುಘಾಮಠದ ಮುರುಘದೇಶಿಕೇಂದ್ರರು ರಚಿಸಿದ ಹಮ್ಮೀರಕಾವ್ಯ ಈ ಭಾಗದ ಪ್ರಥಮ ಕಾವ್ಯ ಕೃತಿಯಾಗಿದೆ. ಅಂದಿನಿಂದ ಹಲವಾರು ಸಾಹಿತಿಗಳು, ಸಂಶೋಧಕರು, ಕವಿಗಳು ನಿರಂಯರವಾಗಿ ಕಾವ್ಯ, ನಾಟಕ, ಕಾದಂಬರಿ, ಕಥಾಸಂಕಲನಗಳು ಹೊರತರುವ ಮೂಲಕ ನಾಡಿನ ಕನ್ನಡ ಭಾಷಾ ಶ್ರೀಮಂತಿಕೆಯಲ್ಲಿ ಗುಳೇದಗುಡ್ಡದ ಪಾತ್ರ ಹಿರಿದಾಗಿದೆ. ವೃತ್ತಿ ಹಾಗೂ ಹವ್ಯಾಸಿ ರಂಗಭುಮಿಗೆ ತನ್ನದೇ ಆದ ಕೊಡುಗೆಯನ್ನು ನೀಡಿರುವ ಕಲ್ಲೂಬಾಯಿ, ಕನ್ನಡದ ಷೇಕ್ಸಪಿಯರ್ ಎಂದೇ ಖ್ಯಾತರಾದ ಕಂದಗಲ್ಲ ಹನಮಂತರಾಯರ ಕರ್ಮ ಗುಳೇದಗುಡ್ಡದ ಪ್ರತಿಮನೆಯಲ್ಲೂ ಕಲಾವಿದರೂ ಕಾಣುತ್ತಾರೆ. ಪ್ರಥಮ ರಂಗಭೂಮಿಯ ಪ್ರಥಮ ಕಲಾವಿದೆ ಂಭೂಮಿಯಾದ ಗುಳೇದಗುಡ್ಡ ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತಿಕೆ ಹೊಂದಿದೆ. ಜಾತ್ರೆಗಳು ಇಲ್ಲಿನ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಂಡು ಬಂದಿವೆ.

ಕರ್ನಾಟಕ ಜಾನಪದ ವಿವಿ ಕುಲಪತಿ ಪ್ರೊ.ಟಿ.ಎಂ.ಭಾಸ್ಕರ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಕನ್ನಡ ನಾಡಿನ ಶ್ರೀಮಂತ ಭಾಷೆಯಾಗಿದೆ. ಕನ್ನಡದ ಅಸ್ಮಿತೆಯನ್ನು ಪರಿಚಯಿಸುವ ಅನೇಕ ಸಾಹಿತ್ಯ ಪ್ರಕಾರಗಳು ಕನ್ನಡದಲ್ಲಿ ಮೂಡಿ ಬಂದಿದ್ದು ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಕೆಲಸವನ್ನು ನಾವೆಲ್ಲ ಒಗ್ಗಟ್ಟಾಗಿ ಮಾಡಬೇಕಾಗಿದೆ ಕನ್ನಡಕ್ಕೆ ತನ್ನದೇ ಆದ ವಿಶೇಷ ಸ್ಥಾನಮಾನವಿದೆ. ಸರ್ಕಾರ ಕನ್ನಡ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸಾಕಷ್ಟು ಶ್ರಮವಹಿಸುತ್ತಿದ್ದು ಅದಕ್ಕೆ ನಾವೂ ಕೂಡಾ ಕೈಜೋಡಿಸಿ ಕನ್ನಡ ಭಾಷೆಯನ್ನು ಮತ್ತಷ್ಟು ಶ್ರೀಮಂತಗೊಳಿಸಬೇಕಾಗಿದೆ. ಅದಕ್ಕೆ ಸಂಘಟನೆಯ ಬಲ ಅವಶ್ಯವಾಗಿದ್ದು, ಕನ್ನಡ ಸಾಹಿತ್ಯ ಶ್ರೀಮಂತಿಕೆಗೆ ನಾಡು ಹೆಸರಾಗಿದೆ. ನಾಡು ನುಡಿ, ನೆಲ, ಜಲ ನಮ್ಮ ಆಸ್ತಿ. ಅದನ್ನು ಕಟ್ಟುನಿಟ್ಟಾಗಿ ಉಳಿಸುವ ಕೆಲಸವನ್ನು ನಾವೆಲ್ಲ ಒಂದಾಗಿ ಮಾಡೋಣ ಎಂದರು.

ಮಾಜಿ ಶಾಸಕ ಎಸ್.ಜಿ. ನಂಜಯ್ಯನಮಠ ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು. ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶ್ರೀಜಗದ್ಗುರು ಗುರುಸಿದ್ಧ ಪಟ್ಟದಾರ್ಯ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಂಜಯ ಬರಗುಂಡಿ, ಬಿ.ಕೆ.ನಂದನೂರ, ಬಿ.ಎಂ.ಹೊರಕೇರ, ಕರವೇ ಅಧ್ಯಕ್ಷ ರವಿ ಅಂಗಡಿ, ಕಸಾಪ ಜಿಲ್ಲಾ ಕೋಶಾಧ್ಯಕ್ಷ ಸಿ.ಎಂ. ಜೋಶಿ, ಪಿಇಟಿ ಚೇರಮನ್ ಕಮಲಕಿಶೋರ ಭಂಡಾರಿ, ಗೌರವ ಕಾರ್ಯದರ್ಶಿ ರವೀಂದ್ರ ಪಟ್ಟಣಶೆಟ್ಟಿ, ಕಸಾಪ ತಾಲೂಕು ಅಧ್ಯಕ್ಷ ಎಚ್.ಎಸ್. ಘಂಟಿ, ಡಾ.ಎಂ.ಪಿ.ಹುಗ್ಗಿ, ಭಾಗೀರತಿ ಆಲೂರ, ಸಂಗಣ್ಣ ಚಿಕ್ಕಾಡಿ, ಅಕ್ತರಹುಸೇನ ಅಫಘಾನ, ಗುಂಡಪ್ಪ ಕೋಟಿ, ಯಲ್ಲಪ್ಪ ಮನ್ನಿಕಟ್ಟಿ ಇತರರು ಇದ್ದರು.

# ಅಜಾಗರೂಕತೆಯಿಂದ ಅಗ್ನಿ ಅವಘಡ: ಪ್ರಮೋದ್ ಸುಂಕದ



**ವಿಜಯಪುರ :** ಅವಘಡಗಳನ್ನು ತಪ್ಪಿಸುವುದಕ್ಕೆ ಪ್ರತಿಯೊಬ್ಬರುಅಗ್ನಿಇರುವಸ್ಥಳಗಳಲ್ಲಿಜಾಗೃತಿಯಿಂದ ಇರಬೇಕೆಂದು ಅಗ್ನಿಶಾಮಕ ಠಾಣಾ ಅಧಿಕಾರಿ ಪ್ರಮೋದ್ ಸುಂಕದ ಹೇಳಿದರು.

ಮಾದರಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಸತಿಯುಕ್ತ ಸರಕಾರಿ ಪ್ರಥಮ ದರ್ಜೆ ಕಾಲೇಜು ದತ್ತು ಗ್ರಾಮ ಹಡಲಗೇರಿಯಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣಗಳನ್ನು ಬೆಳೆಸಲು ಎನ್.ಎಸ್.ಎಸ್ ಸೂಕ್ತ ವೇದಿಕೆ ಎಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಪ್ರೊ. ಸರೋಜಿನಿ ಬಿರಾದಾರ ಹೇಳಿದರು. ಪ್ರೊ. ಅರುಣಾ ಗುಜ್ಜರಿ ಪ್ರಾಸ್ತಾವಿಕವಾಗಿ ಮಾತನಾಡಿದರು, ನಿವೇದಿತಾ ನಿರೂಪಿಸಿದರು. ಕುಮಾರಿ. ಅದಿತಿ ವಂದಿಸಿದರು. ಮಲ್ಲವ್ವ ಚಲವಾದಿ, ದೇವಮ್ಮ ಹರಿಂದ್ರಾಳ, ಸುಭಾಷ ರಾಠೋಡ ಮತ್ತು ಪ್ರೊ. ಪೃಥ್ವಿ ಕೆ.ವಿ, ರವಿ ನಾಲತವಾಡ ಉಪಸ್ಥಿತರಿದ್ದರು.

# ಶಿಕ್ಷಣ ಸಂಸ್ಥೆಗಳ ಕಾರ್ಯ ಸ್ತುತ್ಯಾಹ: ಎಸ್.ಆರ್. ಪಾಟೀಲ್




**ವಿಜಯಪುರ :** ಶಿಕ್ಷಣ ಸಂಸ್ಥೆಗಳು ಸಮಾಜದ ಎಲ್ಲ ವರ್ಗ, ಜಾತಿ, ಲಿಂಗದ ಜನರಿಗೆ ಗುಣಮಟ್ಟದ ಶಿಕ್ಷಣ ನೀಡುವದರಿಂದ ಆರ್ಥಿಕ , ಸಾಮಾಜಿಕ ಏಳಿಗೆ ಸಾಧ್ಯವಾಗಿದೆ ಎಂದು ಕರ್ನಾಟಕ ಸರಕಾರದ ಮಾಜಿ ಸಚಿವ, ಹಿರಿಯ ಸಹಕಾರಿ ಧುರೀಣ ಎಸ್ ಆರ್.ಪಾಟೀಲ ನುಡಿದರು.

ಅವರು ಇಂದಿಲ್ಲಿ ಸಿಕ್ಯಾಬ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷರಾದ ಎಸ್.ಎ. ಪುಣೇಕರ ಅವರಿಗೆ ಬೆಳಗಾವಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಿದುದಕ್ಕೆ ಅವರನ್ನು ಸನ್ಮಾನಿಸಿ ಮಾತನಾಡುತ್ತಿದ್ದರು.

ಸಿಕ್ಯಾಬ್ ಶಿಕ್ಷಣ ಸಂಸ್ಥೆ ಹಾಗೂ ಎಸ್.ಎ. ಪುಣೇಕರ ಅವರ ಪ್ರಯತ್ನ ಹಾಗೂ ಶ್ರಮಗಳನ್ನು ಕಳೆದ ನಾಲ್ಕು ದಶಕಗಳಿಂದ ಗಮನಿಸುತ್ತಿದ್ದುಮಹಿಳೆಯರಸಬಲೀಕರಣ, ದುರ್ಬಲ ಹಾಗೂ ಅಲ್ಪಸಂಖ್ಯಾತರ ಶಿಕ್ಷಣ ಹಾಗೂ ಪ್ರಗತಿಗೆ ದುಡಿಯುತ್ತಿದ್ದು ಅವರ ಸಾಧನೆಗೆ ಈ ಗೌರವ ಸಂದಿದೆ ಎಂದು ಎಸ್. ಆರ್. ಪಾಟೀಲ ತಿಳಿಸಿದರು.

ಅವಿಭಜಿತ ಬಾಗಲಕೋಟ ಹಾಗೂ ವಿಜಯಪುರ ಜಿಲ್ಲೆಗಳು ನನ್ನ ಎರಡು ಕಣ್ಣುಗಳಿದ್ದಂತೆಶಿಕ್ಷಣಸಂಸ್ಥೆಗಳಸಹಯೋಗ ಹಾಗೂ ಒಡಂಬಡಿಕೆಗಳು ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಕಾರಣವಾಗುತ್ತದೆ ಎಂದು ಆಶಯ ವ್ಯಕ್ತ ಪಡಿಸಿದರು.

ಗ್ರಾಮೀಣ ಭಾಗದ ಜನರಿಗೆ ವೈದ್ಯಕೀಯ ಸೌಲಭ್ಯ ಹಾಗೂ ವೈದ್ಯಕೀಯ ಶಿಕ್ಷಣ ಹೊರೆಯಲೆಂದು ಬಾಡಗಂಡಿ(ಬೀಳಗಿ) ಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸಿದ್ದಾಗಿ ತಿಳಿಸಿದರು.

ಯುಕೆಪಿ–ಆಲಮಟ್ಟಿ ಕೊನೆಯ ಹಂತದ ಕಾಮಗಾರಿ ಪೂರ್ಣಗೊಂಡಾಗ ಸಿಗುವ 130 ಟಿಎಮ್ಸಿ ನೀರಿನಲ್ಲಿ 80 ಟಿಎಮಸಿ ನೀರು ವಿಜಯಪುರ ಜಿಲ್ಲೆಗೆ ಸಿಗಲಿದ್ದು ಇದರಿಂದ ಜಿಲ್ಲೆಯ ಕೃಷಿ, ತೋಟಗಾರಿಗೆ, ಕೈಗಾರಿಕೆ, ಶಿಕ್ಷಣ ಕ್ಷೇತ್ರಗಳ ಚಿತ್ರಣವೇ ಬದಲಾವಣೆ ಆಗಲಿದ್ದು, ಉದ್ಯೋಗಕ್ಕೆ ಜನ ವಿಜಯಪುರಕ್ಕೆ ಬರಲಿದ್ದಾರೆ ಎಂದು ಭವಿಷ್ಯ ನುಡಿದರು.ವೇದಿಕೆಯಮೇಲೆಉಪಸ್ಥಿತರಿದ್ದ ಸಂಸ್ಥೆಯ ನಿರ್ದೇಶಕರಾದ ಸಲಾಹುದ್ದೀನ ಅಯೂಬಿ ಮಾತನಾಡಿ ಶಿಕ್ಷಣ ಕ್ಷೇತ್ರ ನೈತಿಕತೆ ಬೆಳೆಸಿಕೊಂಡಾಗ ಮಾತ್ರ ಉಳಿಯಲು ಸಾಧ್ಯ ಎಂದರು. ಲಂಡನ್ನಿನ ಮಿದುಳು ರಕ್ತನಾಳ ತಜ್ಞ ಡಾ. ಶುಜಾವುದ್ದೀನ್ ಮಾತನಾಡಿ ಶಿಕ್ಷಣ ಸಮಾನತೆಯನ್ನು ತರುವಲ್ಲಿ ಸಹಾಯ ಮಾಡುತ್ತದೆ.

ದೇಶದ ಎಲ್ಲ ನಾಗರಿಕರೂ ಒಂದೇ ಎಂಬ ಭಾತೃತ್ವಭಾವ ಬರಬೇಕೆಂದರೆ ಶಿಕ್ಷಣ ಎಲ್ಲರಿಗೂ ಲಭ್ಯವಾಗಬೇಕೆಂದು ಹೇಳಿದರು.

ಸಿಕ್ಯಾಬ ಸಂಸ್ಥೆಯ ಕಾರ್ಯದರ್ಶಿ ಎ. ಎಸ್. ಪಾಟೀಲ ಅವರು ಮಾತನಾಡಿ ಎಸ್. ಆರ್. ಪಾಟೀಲ ಅವರಂತಹ ನಿಜವಾದ ಜನನಾಯಕರು ಎಸ್. ಎ. ಪುಣೇಕರ ಅವರನ್ನು ಗೌರವಿಸಿ ಸನ್ಮಾಸಿಸಲು ಆಗಮಿಸುತ್ತಿರುವದು ಅವರ ಸರಳತೆ, ಮಹಾನ್ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ ಎಂದು ನುಡಿದರು.

ಸಿಕ್ಯಾಬ್ ಎ. ಆರ್. ಎಸ್ ಇನಾಮದಾರ ಮಹಿಳಾ ಕಾಲೇಜಿನ ಡಾ. ಮಲ್ಲಿಕಾರ್ಜುನ ಮೇತ್ರಿ ಅತಿಥಿಗಳನ್ನು ಪರಿಚಯಿಸಿ ಸರ್ವರನ್ನು ಸ್ವಾಗತಿಸಿದರು. ಕು. ಆಸ್ಮಾ ನಾಗರದಿನ್ನಿ ಆರಂಭದಲ್ಲಿ ಪವಿತ್ರ ಖುರಾನ್ ಪಠಿಸಿದರು. ಕುಮಾರಿ ಪೃಥ್ವಿ, ಕು. ವಿದ್ಯಾ ಹಾಗೂ ಕು. ಸೀಮಾ ಭಗವದ್ಗೀತೆಯನ್ನು ವಾಚಿಸಿದರು.

ಸಿಕ್ಯಾಬ್ ಎ. ಆರ್. ಎಸ್. ಇನಾಮದಾರ ಮಹಿಳಾ ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಕೆ.ಯಡಹಳ್ಳಿಹಾಗೂಧುರೀಣಎಮ್. ಎಚ್. ಮಹಾಬರಿ, ನಿವೃತ್ತ ಸಾರಿಗೆ ಇಲಾಖೆ ಅಧಿಕಾರಿ ಸಲೀಮ್ ಜಾಹಗೀರದಾರ ವೇದಿಕೆಯಲ್ಲಿ ಉಪಸ್ಥಿತರಿದ್ದರು.. ಪ್ರೊ?ರ. ಸಾದಿಯಾ ಬಾನು ಕಾರ್ಯಕ್ರಮ ನಿರೂಪಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

# ಪಹಲ್ಗಾಮನಲ್ಲಿ ಉಗ್ರರ ದಾಳಿ: ಶಾಂತಿನಿಕೇತನ ಶಿಕ್ಷಣ ಸಂಸ್ಥೆಯಲ್ಲಿ ಖಂಡನೆ




**ವಿಜಯಪುರ :** ನಗರದ ಶಾಂತಿನಿಕೇತನ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಪಹಲ್ಗಾಮ್‌ನಲ್ಲಿ ಉಗ್ರಗಾಮಿಗಳ ದಾಳಿಗೆ ಬಲಿಯಾದ ಹಿಂದುಗಳಿಗೆ ಶನಿವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಂಸ್ಥೆಯ ಅಧ್ಯಕ್ಷೆ ಶೀಲಾ ಬಿರಾದಾರ ಅವರು ಮಾತನಾಡಿ, ಹತ್ಯೆಗೀಡಾದ ಕುಟುಂಬದವರಿಗೆ ದೇವರು ಸಹಿಸಿಕೊಳ್ಳುವ ಶಕ್ತಿಯನ್ನು ನೀಡಲಿ ಎಂದರು.

ಭಯೋತ್ಪಾದನೆಯು ಇಂದು ಜಗತ್ತಿನಲ್ಲಿ ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಭಯೋತ್ಪಾದನೆಯು ಸಮಾಜದಲ್ಲಿ ಅಶಾಂತಿಯನ್ನು ಉಂಟುಮಾಡುತ್ತಿದೆ. ಅದನ್ನು ತೊಲಗಿಸಲು ಎಲ್ಲರೂ ಕೈ ಜೋಡಿಸಬೇಕು. ಸರಕಾರ ಉಗ್ರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು, ಭಯೋತ್ಪಾದನೆಮುಕ್ತ ಸಮಾಜವನ್ನು ನಿರ್ಮಿಸಬೇಕಾಗಿದೆ ಎಂದು ನುಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕಿ ದಿವ್ಯಾಬಿರಾದಾರ, ಪ್ರಾಚಾರ್ಯೆ ಫರೀನ್ ಖಾನ್, ಸುಬೇದಾರ ಮೇಜರ್ ಪಿಎಸ್ ಚವ್ಹಾಣ, ಪ್ರವೀಣಕುಮಾರ ಗೆಣ್ಣೂರ ಎ. ಎಚ್ಸಗರ, ಸುರೇಖಾ ಪಾಟೀಲ, ಸರೋಜಾ ಕರಕಳ್ಳಿ, ಅನೀಲ ಬಾಗೇವಾಡಿ, ಉಮಾ ಬಡಾನೂರ, ದೀಪಾ ತಿಳಗೊಳ, ಅಪ್ಸರಾ ಸಿಂದಗಿಕರ್,ಅಲ್ತಾಫ್,ಆರೀಫ್,ರತೀಶಇತರರಿದ್ದರು.

# ಪಹಲ್ಗಾಂವ ಉಗ್ರರ ದಾಳಿ: ಕನ್ನೂರನಲ್ಲಿ ಶಾಲಾ ಮಕ್ಕಳ ಆಕ್ರೋಶ



**ವಿಜಯಪುರ :** ತಾಲೂಕಿನ ಕನ್ನೂರ ಶಾಂತಿ ಕುಟೀರದಲ್ಲಿ ವಿದ್ಯಾರ್ಥಿಗಳು ಅಮಾಯಕರ ಮೇಲೆ ಉಗ್ರರು ದಾಳಿ ನಡೆಸಿದ್ದನ್ನು ತೀವ್ರವಾಗಿ ಖಂಡಿಸಿದ್ದಾರೆ.

ದೇಶ ಕಿ ರಕ್ಷಾ ಕೌನ ಕರೆಗಾ? ಹಮ ಕರೆಂಗೆ! ಹಮ ಕರೆಂಗೆ" "ಜಮ್ಮು ಮತ್ತು ಕಾಶ್ಮೀರ ? ಭಾರತ ಮಾತೆಯ ಸಿಂಧೂರ" " "ಈ ದೇಶದ ರಕ್ಷಣೆಯು ಯಾರ ಹೊಣೆ? ನಮ್ಮ ಹೊಣೆ""ಕಾಶ್ಮೀರದಲ್ಲಿ ಉಗ್ರರ ದಾಳಿಯನ್ನು ನಾವು ಖಂಡಿಸುತ್ತೇವೆ" "ಧರ್ಮಾಧಾರಿತ ಕ್ರೂರ ಕೃತ್ಯಗಳು ಅಂತ್ಯಗೊಳ್ಳಲಿ" "ಶಾಂತಿ ನಮ್ಮ ಮಂತ್ರ, ಪ್ರೀತಿ ನಮ್ಮ ಅಸ್ತ್ರ" ಎಂಬ ಘೋಷಣೆಗಳು ಕೂಗಿ ವಿದ್ಯಾರ್ಥಿಗಳು ತಮ್ಮ ಆಕ್ರೋಶವನ್ನು ವ್ಯಕ್ತ ಪಡಿಸಿದರು. 515 ವಿದ್ಯಾರ್ಥಿಗಳು ಶಾಂತಿಕುಟೀರ ಕನ್ನೂರಿನಲ್ಲಿ ಜರುಗುತ್ತಿರುವ 1 ತಿಂಗಳ ಗ್ರಾಮೀಣ ಭಾಗದ ಸರ್ಕಾರಿ ಶಾಲೆಯ ಮಕ್ಕಳ ಉಚಿತ ಬೇಸಿಗೆ ಶಿಬಿರದ5ರಿಂದ10ನೇತರಗತಿಯವಿದ್ಯಾರ್ಥಿ ವಿದ್ಯಾರ್ಥಿನಿಯರು ಪಹಲಗಾಂವದಲ್ಲಿ ನಡೆದ ಉಗ್ರರ ದಾಳಿಯನ್ನು ಖಂಡಿಸಿ, ತಮ್ಮ ಸಾತ್ವಿಕ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. "ಭಾರತ ನನ್ನ ದೇಶ" ಸಕಲ ಭಾರತೀಯರು ನನ್ನ ಬಾಂಧವರು" ಎಂಬ ಮಾತು ಕೇವಲ ಪಠ್ಯ ಪುಸ್ತಕದಲ್ಲಿಯೇ ಉಳಿಯದೆ ಜೀವನದಲ್ಲಿ ಅಳವಡಿಸಿಕೊಳ್ಳಲು ಈ ಮಕ್ಕಳು ಪ್ರಯತ್ನಿಸಿದ್ದಾರೆ.

ಕ್ರೂರ, ಹೀನಾಯ ಕೃತ್ಯವನ್ನು ಪ್ರತಿಭಟಿಸಲು ತಮ್ಮಲ್ಲಿರುವ ಪ್ರತಿರೋಧದ ಜ್ವಾಲೆಯನ್ನು ಕೈಯಲ್ಲಿ ಮೇಣದಬತ್ತಿ ಪ್ರಜ್ವಲಿಸಿ ಹೊರಹಾಕಿದ್ದಾರೆ.

ಶ್ರೀ ಸಮರ್ಥ ಸದ್ಗುರು ಗಣಪತರಾವ ಮಹಾರಾಜರು ಭಾರತೀಯ ಸುರಾಜ್ಯ ಸಂಸ್ಥೆಯನ್ನು ಸ್ಥಾಪಿಸಿ ತನ್ಮೂಲಕ ಜಾತಿ, ಧರ್ಮ, ಪಂಗಡ, ಪ್ರಾಂತ್ಯ, ಭಾಷೆ ಇಂತಹ ಸಂಕುಚಿತ ಧೋರಣೆಗಳಿಗೆ ಕಡಿವಾಣ ಹಾಕುವ ರಾಷ್ಟ್ರೀಯ ಏಕತೆಯನ್ನು ಉತ್ತೇಜಿಸಲು ಪ್ರಯತ್ನಿಸಿದ್ದರು. ಸದ್ಗುರುಗಳ ಈ ಕಳಕಳಿಯನ್ನು ಮಕ್ಕಳು ಪ್ರತಿನಿಧಿಸಿದ್ದಾರೆ. ವ್ಯಕ್ತಿಗಳ ನಡುವೆ ಸಾಮರಸ್ಯ, ಸಹೋದರತ್ವ , ಪ್ರೀತಿ ಮತ್ತು ಕಲಿಕೆಯನ್ನು ಸ್ಥಾಪಿಸುವ ಮೂಲಕ ಆದರ್ಶ ಭಾರತವನ್ನು ರಚಿಸಲು ಮತ್ತುಸಾಮರಸ್ಯವನ್ನುರಚಿಸುವಪ್ರಯತ್ನದ ನಿಟ್ಟಿನಲ್ಲಿ ಭಾರತೀಯ ಸುರಾಜ್ಯ ಸಂಸ್ಥೆಯು ಕಾರ್ಯಗತವಾಗಿದೆ. ಬಾಲ್ಯದಿಂದಲೇ ಇಂತಹ ತತ್ವವನ್ನು ಮಕ್ಕಳು ಮೈಗೂಡಿಸಲು ಯತ್ನಿಸಲಾಗುತ್ತಿದೆ. ಈ ಸಂಧರ್ಭದಲ್ಲಿ ಭಾರತೀಯ ಸುರಾಜ್ಯ ಸಂಸ್ಥೆಯ ಅಧ್ಯಕ್ಷರು,ಶ್ರೀ ಶ್ರೀಶೈಲೇಶ್ವರ ವಿದ್ಯಾಕೇಂದ್ರದ ಶಿಕ್ಷಕರು, ರಾಮರಾಜ್ಯ ಕಲಾಮೇಳದ ಕಾರ್ಯಕರ್ತರು ಹಾಗೂ ಕನ್ನೂರಿನ ಸುತ್ತಮುತ್ತಲಿನ ಸುಮಾರು 515 ಮಕ್ಕಳು ಪ್ರತಿಭಟನೆಯಲ್ಲಿ ಭಾಗಿ ಆಗಿದ್ದರು. ಮಕ್ಕಳು ಸ್ವಯಂ ಪ್ರೇರಣೆಯಿಂದ "ಭಯೋತ್ಪಾದನೆ ನಿರ್ಮೂಲನೆಯಲ್ಲಿನನ್ನಪಾತ್ರ" ಈ ವಿಷಯ ಕುರಿತಾಗಿ ಪ್ರಬಂಧವನ್ನು ಬರೆಯಲು ಸ್ವ ಇಚ್ಛೆಯಿಂದ ಮುಂದಾದರು. ಸಭೆಯು ಒಂದು ನಿಮಿಷದ ಮೌನಾಚರಣೆಯೊಂದಿಗೆ ಮುಕ್ತಾಯಗೊಂಡಿತು.

# ವಿದ್ಯಾರ್ಥಿಗಳಲ್ಲಿ ಪ್ರಾಯೋಗಿಕ ಜ್ಞಾನ ಮುಖ್ಯವಾಗಿದೆ

**ಬನಹಟ್ಟಿ :** ವಿದ್ಯಾರ್ಥಿಗಳು ಆಧುನಿಕ ಜಗತ್ತಿನ ಜೊತೆಗೆ ಸ್ಪರ್ಧೆ ಮಾಡಬೇಕಾದರೆ ಪಠ್ಯದ ಜೊತೆಗೆ ಪ್ರಾಯೋಗಿಕ ಜ್ಞಾನವನ್ನು ಪಡೆದುಕೊಳ್ಳಬೇಕು ಎಂದು ಪ್ರಾಚಾರ್ಯ ಡಾ. ಜಿ. ಆರ್. ಜುನ್ನಾಯ್ಕರ್ ತಿಳಿಸಿದರು. ಅವರು ಮಂಗಳವಾರ ಬನಹಟ್ಟಿಯ ತಮ್ಮಣ್ಣಪ್ಪ ಚಿಕ್ಕೋಡಿ ಕಾಲೇಜಿನಲ್ಲಿ ಬಿ.ಕಾಮ್. ಅಂತಿಮ ವರ್ಷದ ವಿದ್ಯಾರ್ಥಿಗಳು ಸಿದ್ಧಪಡಿಸಿದ ಯೋಜನಾ ವರದಿಗಳನ್ನು ಬಿಡುಗಡೆ ಮಾಡಿ ಮಾತನಾಡಿದರು.

ಬಿಬಿಎ ವಿಭಾಗದ ಸಂಯೋಜಕ ಎಸ್. ಬಿ. ಉಕ್ಕಲಿ ಮಾತನಾಡಿ, ವಿದ್ಯಾರ್ಥಿಗಳು ಬೇರೆ ಬೇರೆ ಸಂಸ್ಥೆಗಳಿಗೆ ಹೋಗಿ ಅಲ್ಲಿ ಅಧ್ಯಯನ ಮಾಡಿಕೊಂಡು ಬಂದಿರುವ ವಿಷಯಗಳನ್ನು ಒಂದು ಕಡೆಗೆ ಕ್ರೋಢಿಕರಿಸಿದ ವರದಿಗಳಿಂದ ಅವರ ಆತ್ಮಕ್ಕೆ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತವೆ. ಅಧ್ಯಯನದ ಜೊತೆಗೆ ಮಾರುಕಟ್ಟೆ ಮತ್ತು ಹಣಕಾಸು ಕ್ಷೇತ್ರದಲ್ಲಿ ಆದಂತಹ ಬದಲಾವಣೆಗಳ ಬಗ್ಗೆ ಗಮನ ನೀಡಬೇಕು. ವಿದ್ಯಾರ್ಥಿಗಳು ತಮ್ಮಲ್ಲಿರುವ ಹೊಸ ಚಿಂತನೆಗಳನ್ನು ವ್ಯಕ್ತಪಡಿಸುವಲ್ಲಿ ಇಂಥ ಯೋಜನಾ ವರದಿಗಳು ಪ್ರಾಮುಖ್ಯವಾಗಿರುತ್ತವೆ ಎಂದು ತಿಳಿಸಿದರು.

ವಿಭಾಗದ ಮುಖ್ಯಸ್ಥೆ ಗೀತಾ ಸಜ್ಜನ, ಐಕ್ಯೂಎಸಿ ಸಂಯೋಜಕ ಡಾ. ಪ್ರಕಾಶ ಕೆಂಗನಾಳ, ಗೋಕುಲ ಕಾಬ್ರಾ, ರಶ್ಮಿ ಕೊಕಟನೂರ, ಶ್ವೇತಾ ಮಠದ, ಮಯೂರಿ ಮಂಡಿ, ವಿಜಯಲಕ್ಷ್ಮಿ ಮಾಚಕನೂರ, ವಿಶ್ವಜ ಕಾಡದೇವರ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಒಳ ಮೀಸಲಾತಿ ಕುರಿತು ಕಾರ್ಯಾಗಾರ ಸಭೆ ಛಲವಾದಿ ಎಂದು ನಮೂದಿಸಲು ಮನವಿ




**ಬಾಗಲಕೋಟ :** ಪರಿಶಿಷ್ಟ ಜಾತಿಯಲ್ಲಿರುವ 101 ಜಾತಿಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿ ಪ್ರಮಾಣ ಹಂಚಿಕೆಗಾಗಿ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗ ಪರಿಶಿಷ್ಟ ಜಾತಿಗಳ ಸಮೀಕ್ಷೆ ನಡೆಸಲಿದೆ. ಈ ಸಂದರ್ಭದಲ್ಲಿ ಬಲಗೈಗೆ ಸಂಬಂಧಿಸಿದ 37 ಉಪ ಜಾತಿಗಳಿಗೆ ಸೇರಿದವರು ತಮ್ಮ ಉಪಜಾತಿ ಎದುರು ಕಡ್ಡಾಯವಾಗಿ ಛಲವಾದಿ ಅಥವಾ ಹೊಲೆಯರ ಯಾವುದಾದರೂ ಒಂದನ್ನು ನಮೂದಿಸಬೇಕು' ಎಂದು ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾದ ಜಿಲ್ಲಾಧ್ಯಕ್ಷ ಪ್ರೇಮನಾಥ ಗರಸಂಗಿ ಮನವಿ ಮಾಡಿದರು.

ನವನಗರದ ಅಕ್ಷಯ ಹೊಟೇಲ್ ದಲ್ಲಿ ನಡೆದ ಒಳ ಮೀಸಲಾತಿ ಜಾತಿ ಜನಗಣತಿ ಕುರಿತು ಬಲಗೈ ಸಂಬಂಧಿತ ಜಾತಿಗಳ ಜಿಲ್ಲೆಯ ಎಲ್ಲ ತಾಲ್ಲೂಕುಗಳ ಮುಖಂಡರ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಅವರು ಸದಾಶಿವ ಆಯೋಗ ಹಾಗೂ ಜೆ.ಸಿ. ಮಾಧುಸ್ವಾಮಿ ಸಮಿತಿಯ ವರದಿಗಳಲ್ಲಿ ಇರುವ ನ್ಯೂನತೆಗಳನ್ನು ಸರಿಪಡಿಸಿ ವೈಜ್ಞಾನಿಕವಾಗಿ ಮಾಹಿತಿ ಸಂಗ್ರಹಿಸಲು ಸರಿಪಡಿಸಲು ಸರ್ಕಾರ ನಾಗಮೋಹನ್ ದಾಸ್ ಆಯೋಗ ರಚಿಸಿದೆ. ಸಮೀಕ್ಷೆ ಸಂದರ್ಭದಲ್ಲಿ ಆಯೋಗಕ್ಕೆ ಸರಿಯಾದ ಮಾಹಿತಿ ನೀಡಬೇಕು' ಎಂದು ಹೇಳಿದರು.

ಸಮೀಕ್ಷೆ ಮುಗಿಯುವವರೆಗೆ ನಾವು ಕಾವಲಗಾರರಂತೆ ಕೆಲಸ ಮಾಡಬೇಕು. ರಾಜ್ಯದಲ್ಲಿರುವ ಪರಿಶಿಷ್ಟ ಜಾತಿಗಳಲ್ಲಿ ಬಲಗೈನವರೇ ಹೆಚ್ಚಾಗಿದ್ದಾರೆ. ಸಮೀಕ್ಷೆಯಲ್ಲಿ ನಮ್ಮ ಸಂಖ್ಯೆ ನಿಖರವಾಗಿ ಗೊತ್ತಾಗಬೇಕಾದರೆ ಎಲ್ಲರೂ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬೇಕು ಎಂದರು.

**ಧರ್ಮ ಸಮೀಕ್ಷೆಯಲ್ಲ:**

'ಇದು ಜಾತಿ ಸಮೀಕ್ಷೆಯೇ ಹೊರತು ಧರ್ಮ ಸಮೀಕ್ಷೆಯಲ್ಲ. ಇಲ್ಲಿ ಧರ್ಮದ ಕಾಲಂ ಇರುವುದಿಲ್ಲ. ಹಾಗಾಗಿ, ಪರಿಶಿಷ್ಟ ಜಾತಿಯವರು ತಮ್ಮ ಧರ್ಮದ ವಿಷಯಕ್ಕೆ ಮಹತ್ವ ನೀಡುವ ಅಗತ್ಯವಿಲ್ಲ. ಸಾರ್ವತ್ರಿಕ ಜನಗಣತಿಯಲ್ಲಿ ಧರ್ಮದ ಕಾಲಂನಲ್ಲಿ ಕೆಲವರು ಬೌದ್ಧ ಧರ್ಮ ಎಂದು ನಮೂದಿಸಿದರೆ, ಜಾತಿ ಕಲಂನಲ್ಲಿ ಪರಿಶಿಷ್ಟ ಜಾತಿಯ ಉಪ ಜಾತಿ ಹೆಸರು ನಮೂದಿಸಲೇಬೇಕು. ಧರ್ಮ ನಮೂದಿಸಿ ಉಪ ಜಾತಿ ನಮೂದಿಸದಿದ್ದರೆ ಅಂತವರನ್ನು ಅಲ್ಪಸಂಖ್ಯಾತರ ಗುಂಪಿಗೆ ಈ ಬಗ್ಗೆ ಎಚ್ಚರಿಕೆ ಇರಲಿ' ಎಂಬ ಕಿವಿಮಾತನ್ನು ನ್ಯಾಯವಾದಿ ಬಸವರಾಜ ಬದಾಮಿ ಹೇಳಿದರು.

**ಜಾತಿ ನಮೂದಿಸದಿದ್ದರೆ ಸೌಲಭ್ಯ ರದ್ದು!**

'ಸಮೀಕ್ಷೆ ಸಂದರ್ಭದಲ್ಲಿ ಉಪ ಜಾತಿಗಳ ಎದುರು ಬಲಗೈ ಛಲವಾದಿ ಅಥವಾ ಹೊಲೆಯ ಎಂದು ಯಾವುದಾದರೂ ಒಂದನ್ನು ನಮೂದಿಸದಿದ್ದರೆ ಈ ಜಾತಿಗಳಿಗೆ ಸೇರಿದವರ ಸಂಖ್ಯೆಯಲ್ಲಿ ಏರುಪೇರಾಗಲಿದೆ. ಆಗ ಸರ್ಕಾರದಿಂದ ಸಿಗುವ ರಾಜಕೀಯ ಪ್ರಾತಿನಿಧ್ಯ ಶಿಕ್ಷಣ ಉದ್ಯೋಗ ಸೇರಿದಂತೆ ಸರ್ಕಾರಕ್ಕೆ ಸಂಬಂಧಿಸಿದ ಎಲ್ಲಾ ಯೋಜನೆಗಳು ಹಾಗೂ ಸೌಲಭ್ಯಗಳ ಮೀಸಲಾತಿಯಿಂದ ಶಾಶ್ವತವಾಗಿ ವಂಚಿತರಾಗಬೇಕಾಗುತ್ತದೆ. ಹಾಗಾಗಿ ಸಮೀಕ್ಷೆ ಕುರಿತು ಜಾಗೃತರಾಗಿ ಎಚ್ಚರಿಕೆಯಿಂದ ಜಾತಿ ಮತ್ತು ಉಪ ಜಾತಿಯನ್ನು ನಮೂದಿಸಬೇಕು' ಎಂದು ಬದಾಮಿ ಹೇಳಿದರು.

**ಗ್ರಾಮ ಮಟ್ಟದಿಂದಲೂ ಜಾಗೃತಿ**

ಸಮೀಕ್ಷೆ ಕುರಿತು ಬಲಗೈ ಸಮುದಾಯದವರಿಗೆ ಜಾಗೃತಿ ಮೂಡಿಸಲು ಛಲವಾದಿ ಮಹಾಸಭಾದಿಂದ ಪ್ರತಿ ಊರು ಪಂಚಾಯಿತಿ ಹೋಬಳಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಪ್ರತಿನಿಧಿಗಳನ್ನುನೇಮಿಸಲುಉದ್ದೇಶಿಸಲಾಗಿದೆ. ಇದರಲ್ಲಿ ಸಮುದಾಯದ ಸ್ಥಳೀಯ ಮಟ್ಟದಿಂದ ಜಿಲ್ಲಾ ಮಟ್ಟದವರೆಗಿನ ಹಾಲಿ ಮತ್ತು ಮಾಜಿ ಜನಪ್ರತಿನಿಧಿಗಳು ಇರಲಿದ್ದಾರೆ. ಮೂರು ರೀತಿಯಲ್ಲಿ ಸಮೀಕ್ಷೆ ನಡೆಯಲಿದೆ. ಶಿಕ್ಷಕರು ಮನೆ ಬಾಗಿಲಿಗೆ ಬಂದು ಮಾಹಿತಿ ಸಂಗ್ರಹಿಸಲಿದ್ದಾರೆ.

ಅವರು ಮನೆಗೆ ಬಂದಾಗ ಮಾಹಿತಿ ಕೊಡಲು ಸಾಧ್ಯವಾಗದಿದ್ದರೆ ಅಥವಾ ಮನೆಯಲ್ಲಿ ಇಲ್ಲದಿದ್ದರೆ ಸ್ಥಳೀಯವಾಗಿ ವ್ಯವಸ್ಥೆ ಮಾಡಿರುವ ಬೂತ್ ಕಚೇರಿಗೆಹೋಗಿ ಮಾಹಿತಿಕೊಡಬೇಕು. ವಿದೇಶದಲ್ಲಿರುವವರು ಸೇರಿದಂತೆ ಊರುಬಿಟ್ಟು ಬೇರೆ ಕಡೆ ಉದ್ಯೋಗಕ್ಕಾಗಿ ನೆಲೆಸಿರುವವರು ಮೊಬೈಲ್ ಆಯಪ್ ಮೂಲಕ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬಹುದು ಎಂದು ಡಾ.ಎಂ.ಎಚ್. ಚಲವಾದಿ ತಿಳಿಸಿದರು.

ಮುಧೋಳದ ರವಿ ಕಾಂಬಳೆ,ಬೀಳಗಿಯ ಪಡಿಯಪ್ಪ ಕಳ್ಳಿಮನಿ,ಜಮಖಂಡಿಯ ರವಿ ಬಬಲೇಶ್ವರ,ಶರಣಪ್ಪ ಬೇವೂರ,ನ್ಯಾಯವಾದಿ ಯಮನಪ್ಪ ಶಿರೂರ,ಸಂಗಪ್ಪ ಚಲವಾದಿ ಮೊದಲಾದವರು ಮಾತನಾಡಿದರು.

ವೇದಿಕೆಯ ಮೇಲೆ ನಗರಸಭೆಯ ಸಭಾಪತಿ ಯಲ್ಲಪ್ಪ ನಾರಾಯಣಿ,ಶ್ರೀ ಮತಿ ಗೆಜ್ಜಲಗಟ್ಟಿ,ರಂಗಪ್ಪ ಕೋಟಿ ಉಪಸ್ಥಿತರಿದ್ದರು. ಪ್ರಾಸ್ತಾವಿಕವಾಗಿ ಜಮಖಂಡಿಯ ನ್ಯಾಯವಾದಿ ಎನ್.ಬಿ.ಗಸ್ತಿ ಅವರು ಮಾತನಾಡಿದರು.

ಕಾರ್ಯಾಗಾರದಲ್ಲಿ ಸದಾಶಿವ ಕೊಡಬಾಗಿ,ಮಹೇಶ ಬೀಳಗಿ,ಮನೋಹರ ಗರಸಂಗಿ, ಗುರುಶಾಂತಪ್ಪ ಮದೀನಕರ, ಹುಲಗೆಪ್ಪ ಹೊದ್ಲೂರ ಕಮತಗಿಯ ನಾಟೇಕರ, ಎಚ್.ಡಿ.ಹೊಸಮನಿ, ನರಸಪ್ಪ ಹಿರೇಮನಿ,ಹನಮಂತ ಗಚ್ಚಿನಮನಿ, ಶಶಿಕಾಂತ ದೊಡಮನಿ ಸೇರಿದಂತೆ ಹುನಗುಂದ, ಬದಾಮಿ,ಇಲಕಲ್ಲ,ಗುಳೇದಗುಡ್ಡ,ಮುಧೋಳ, ಬೀಳಗಿ,ಜಮಖಂಡಿ ಹಾಗೂ ರಬಕವಿಯ ಭಾಗದಿಂದ ಸಮುದಾಯದ ಮುಖಂಡರು ಭಾಗವಹಿಸಿದ್ದರು.

ಆರಂಭದಲ್ಲಿ ಶ್ರೀಮತಿ ಕಲಾವತಿ ಬನಸೋಡೆ ಅವರು ಪ್ರಾರ್ಥನೆ ಮಾಡಿದರು.

# ಗುಡೇಕೋಟೆ ಪೋಲೀಸ್ ಠಾಣೆಯಲ್ಲಿ ಬಸವ ಜಯಂತಿ ಆಚರಣೆ



**ಕೂಡ್ಲಿಗಿ :** 12ನೇ ಶತಮಾನದಲ್ಲಿ ಜಾತ್ಯತೀತ ಸಮ ಸಮಾಜದ ಕನಸುಗಾರ ಬಸವಣ್ಣನವರ ತತ್ವ ಆದರ್ಶಗಳು ನಮಗೆಲ್ಲ ದಾರಿದೀಪ, ನಾವೆಲ್ಲರೂ ಅವುಗಳನ್ನು ಅರಿತು ನಮ್ಮ ಜೀವನದಲ್ಲಿ ರೂಢಿಸಿಕೊಳ್ಳಬೇಕು ಎಂದು ಗುಡೇಕೋಟೆ ಪೋಲೀಸ್ ಠಾಣೆಯ ಪಿಎಸ್ಐ ಸುಬ್ರಮಣ್ಯಂ ಜಿ ಹೇಳಿದರು.

ಅವರು ಕೂಡ್ಲಿಗಿ ತಾಲೂಕು ಗುಡೇಕೋಟೆ ಗ್ರಾಮದ ಪೋಲೀಸ್ ಠಾಣೆಯಲ್ಲಿ ಹಮ್ಮಿಕೊಂಡಿದ್ದ ಜಗಜ್ಯೋತಿ ಬಸವಣ್ಣನವರ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಜ್ಯೋತಿ ಬೆಳಗಿಸುವ ಮೂಲಕ ಉದ್ದೇಶಿಸಿ ಮಾತನಾಡಿದರು.

ಶೋಷಿತರ ಪರ ಕೆಲಸ ಮಾಡಿ ಸಮಾನತೆ ಸಮ ಸಮಾಜದ ಪರಿಕಲ್ಪನೆ ಕಂಡಿದ್ದ ಮಹಾನ್ ದರ್ಶನಿಕ ಬಸವಣ್ಣನವರು ಜಗತ್ತಿನ ಪವಾಡ ಪುರುಷರು, ಸಮಾನತೆ ಜಾತಿ ರಹಿತ ಸಮಾಜದ ಕಲ್ಪನೆ ಸಾಕಾರ ಮಾಡುವ ಮೂಲಕ ಸಮ ಸಮಾಜ ವಾದಕ್ಕೆ ಅವರು ಬುನಾದಿ ಹಾಕಿದ್ದರು ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ಗುಡೇಕೋಟೆ ಪೋಲೀಸ್ ಠಾಣೆಯ ಎಎಸ್ಐ ಬಾಬಾ ಫಕೃದ್ದೀನ್, ಯೋಗೇಶ್, ಪೇದೆಗಳಾದ ಸ್ವರೂಪಾನಂದ,ನಾಗೇಶ್, ಮಹಾಂತೇಶ್,

ಮುತ್ತಣ್ಣ, ಅನುಷಾ ಸೇರಿದಂತೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ನಾಗರಹುಣಿಸೆ:ಬಸವ ಜಯಂತಿ: ಎತ್ತುಗಳ ಮೆರವಣಿಗೆ–ಸಂಭ್ರಮ



**ಕೂಡ್ಲಿಗಿ :** ಕೂಡ್ಲಿಗಿ ತಾಲೂಕಿನ ನಾಗರಹುಣಿಸೆ ಗ್ರಾಮದಲ್ಲಿ ಮಹಾನ ಮಾನವತಾವಾದಿ ವಿಶ್ವಗುರು, ಜಗಜ್ಯೋತಿ ಬಸವ ಜಯಂತೋತ್ಸವದ ಪ್ರಯುಕ್ತ ರೈತರ ತಮ್ಮ ಜೀವನಾಡಿಯಾದ ಎತ್ತುಗಳ ಮೆರವಣಿಗೆಯನ್ನು ಅದ್ದೂರಿಯಾಗಿ ನಡೆಸಿದರು.

ಎತ್ತು ಹಾಗೂ ದನಕರುಗಳ ಮೈ ತೊಳೆದು, ಎತ್ತುಗಳ ಕೊಂಬುಗಳಿಗೆ ನಾನಾ ಬಣ್ಣ ಹಚ್ಚಿ, ಕೊಂಬೆಣಸು, ಜೂಲಗಳನ್ನು ಹಾಕಿ ಅವುಗಳನ್ನು ಶೃಂಗರಿಸಿ ಬಸವಣ್ಣನವರ ಭಾವಚಿತ್ರದೊಂದಿಗೆ ಎತ್ತುಗಳ ಮೆರವಣಿಗೆ ನಡೆಸಲಾಯಿತು.

ಇದಕ್ಕೂ ಮೊದಲು ಗ್ರಾಮದ ಅದಿದೇವತೆಯಾದ ಕಾಮಾಕ್ಷಿದೇವಿ, ಆಂಜನೇಯಸ್ವಾಮಿ,ಎರ್ರಿತಾತಾ ಸ್ವಾಮಿ,ಪತ್ರಿ ಬಸವೇಶ್ವರ ದೇಗುಲದಲ್ಲಿ ಬಸವೇಶ್ವರ ರುದ್ರಾಭಿಷೇಕ ಬಿಲ್ವಾರ್ಚನೆ ಮಹಾ ಮಂಗಳಾರತಿ ವಿಶೇಷ ಪೂಜ ಕೈಂಕರ್ಯಗಳನ್ನು ನಡೆಸಲಾಯಿತು. ಬಸವ ಜಯಂತಿಯ ಪ್ರಯುಕ್ತ ಗ್ರಾಮದ ಮನೆಗಳಲ್ಲಿ ವಿಶೇಷ ಸಿಹಿ ಭೋಜನ ಮಾಡಲಾಯಿತು. ಹೋಳಿಗೆ, ಪಾಯಸ, ಮತ್ತಿತರ ಭೋಜನಗಳನ್ನು ತಮ್ಮ ಜಾನುವಾರುಗಳಿಗೆ ತಿನ್ನಿಸಿದರು.

ರೈತರು ತಮ್ಮ ಎತ್ತುಗಳನ್ನು ವಿಶೇಷವಾಗಿ ಜುಲಾ ಬಲೂನ್ ವಿವಿಧಅಲಂಕಾರಗಳುಸಾಮಗ್ರಿಗಳೊಂದಿಗೆ ವಿಶ್ವಗುರು ಬಸವಣ್ಣನ ಭಾವಚಿತ್ರದೊಂದಿಗೆ ಗ್ರಾಮದ ಬೀದಿಬೀದಿಗಳಲ್ಲಿ ಮಂಗಳ ವಾದ್ಯಗಳೊಂದಿಗೆ ಮೆರವಣಿಗೆ ನಡೆಸಿ ಸಾಮೂಹಿಕ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಸಿದರು.

ಈ ಸಂದರ್ಭದಲ್ಲಿ ಗ್ರಾಮದ ಎಲ್ಲಾ ಮುಖಂಡರು, ವೀರಶೈವ ಲಿಂಗಾಯತ ಸಮುದಾಯದ ಯುವಕರು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State